ಬೆರೆಸದೆ ಉತ್ತರ ಅಪೇಕ್ಷೆ ಮಾಡಿಕೊಂಡು, ಏನಾದರೂ ಒಂದು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥ ದೃಷ್ಟಿಯಿಂದ ನಾವೆಲ್ಲರೂ ಸಹಿತ ಇದನ್ನು ತೆಗೆದುಕೊಂಡುಬಂದಿದ್ದೇವೆ. ಆದರೆ ಇವತ್ತು ನಡೆದಿರತಕ್ಕಂಥ ಘಟನಾವಳಿಗಳ ಪ್ರಕಾರ ಕಾಂಗ್ರೆಸ್ ಶಾಸಕಾಂಗ ಪಾರ್ಟಿಯ ಸಭೆಯಲ್ಲಿ 132 ಜನ ಶಾಸಕರು ಒಂದು ತೀರ್ಮಾನ ತೆಗೆದುಕೊಂಡು ಇವರ ನಾಯಕತ್ವದಲ್ಲಿ, ಈ ಸರ್ಕಾರದಲ್ಲಿ ಮತ್ತು ಇವರ ಮುಖಂಡತ್ವದಲ್ಲಿ ತಮಗೆ ನಂಬಿಕೆ ಇಲ್ಲವೆಂದು ಹೇಳಿ ತೀರ್ಮಾನ ಮಾಡಿದ್ದಾರೆಂದು ಸಹಿತ ಕೇಳಿದ್ದೇವೆ. ತಮ್ಮ ಪಕ್ಷದ ಆಂತರಿಕ ಜಗಳದಲ್ಲಿ....

ಶ್ರೀ ಎಸ್.ಎಂ. ಕೃಷ್ಣ : – ಕಾವೇರಿಗೂ, ಇದಕ್ಕೂ ಏನು ಸಂಬಂಧ?

ಶ್ರೀ ಪಿ.ಜಿ.ಆರ್. ಸಿಂಧ್ಯ : – ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ತಮ್ಮ ಪಕ್ಷದ ಆಂತರಿಕ ಜಗಳದಲ್ಲಿ ನಮಗೆ ಯಾವುದೇ ರೀತಿಯಲ್ಲಿ ಆಸಕ್ತಿ ಇಲ್ಲ.

ಶ್ರೀ ಎಸ್.ಎಂ. ಕೃಷ್ಣ : – ಅದು ನನಗೆ ಕನ್ವೀನ್ಸ್ ಆಗಿದೆ.

ಶ್ರೀ ಪಿ.ಜಿ.ಆರ್ ಸಿಂಧ್ಯ : – ಹಾಗಾದರೆ ಬಹಳ ಸಂತೋಷ. ಆದರ ಪರಿಣಾಮವಾಗಿ ನಿಮ್ಮನ್ನು ಸಸ್ಪೆಂಡ್ ಮಾಡಲಾಗಿದೆಯಂತಲ್ಲ, ಮತ್ತೆ ಅಲ್ಲಿ ಏಕೆ ಕುಳಿತಿದ್ದೀರಿ ಎಂದು ಕೇಳಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : – ಅಧ್ಯಕ್ಷರೇ....

(ಗೊಂದಲ)

ಶ್ರೀ ಎಸ್.ಎಂ. ಕೃಷ್ಣ : – ಅತ್ಯಂತ ಗಂಭೀರವಾಗಿರತಕ್ಕಂಥ ವಿಚಾರದ ಬಗ್ಗೆ ಮಾನ್ಯ ರಾಮಯ್ಯನವರು ಮತ್ತು ವಿರೋಧ ಪಕ್ಷದ ನಾಯಕರು, ಬಿ.ಜೆ.ಪಿ. ಪಕ್ಷದ ನಾಯಕರು ಮಾತನಾಡಿದ್ದಾರೆ. ಪರಿಸ್ಥಿತಿಯ ಗಂಭೀರತೆ ಮತ್ತು ವಿಷಯದ ಗಂಭೀರತೆ ಏನಿದೆ, ಅದಕ್ಕೆ ಲವಲೇಶವೂ ಅಪಚಾರವಾಗದ ರೀತಿಯಲ್ಲಿ ನಾವು ಕಾವೇರಿ ಬಗ್ಗೇನೇ ನಮ್ಮ ಗಮನ ಎಲ್ಲವನ್ನೂ ಸೀಮಿತ ಮಾಡಿದರೆ ಒಳಿತು ಎಂದು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ಉಪಾಧ್ಯಕ್ಷರು : – ರಾಮಯ್ಯನವರೆ, ಇನ್ನು ಎಷ್ಟು ಹೊತ್ತು ಆಗುತ್ತದೆ?

ಶ್ರೀ ವೈ.ಕೆ. ರಾಮಯ್ಯ : – ನನಗೆ ಗೊತ್ತಿಲ್ಲ. ಕೊನೆಯಪಕ್ಷ ಇನ್ನೂ ಒಂದು ಗಂಟೆ ಬೇಕಾಗುತ್ತದೆ.

ಉಪಾಧ್ಯಕ್ಷರು : –ಈಗ ಸದನವನ್ನು ಮುಂದೂಡಿ ಮತ್ತೆ ಎರಡೂವರೆ ಗಂಟೆಗೆ ಸೇರುತ್ತದೆ.

( 3.05 ಗಂಟೆಗೆ ಸಭೆ ಪುನಃ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರಾದ ಶ್ರೀ ವಿ.ಎಸ್. ಕೌಜಲಗಿಯವರು ಉಪಸ್ಥಿತರಿದ್ದರು)

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ವಿಷಯ : – ಸಿ.ಎಲ್.ಪಿ.ಮೀಟಿಂಗ್‌ನಲ್ಲಿ ಕಾಂಗ್ರೆಸ್ ಶಾಸಕರ ವರ್ತನೆ.

ಶ್ರೀ ಆರ್.ವಿ. ದೇಶಪಾಂಡೆ : – ಮಾನ್ಯ ಅಧ್ಯಕ್ಷರೇ, ಇವತ್ತು ನಾವು ಇಷ್ಟೊಂದು ಮಹತ್ವದ ಒಂದು ಗಂಭೀರವಾದ ಸಮಸ್ಯೆ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಆದರೆ ಇಲ್ಲಿ ಇವತ್ತು ಸಭಾನಾಯಕರು ಕಾಣಿಸುತ್ತಿಲ್ಲ, ಸಂಬಂಧಪಟ್ಟ ಉಪಮುಖ್ಯಮಂತ್ರಿಯವರೂ ಕಾಣಿಸುತ್ತಿಲ್ಲ. ಅದಕ್ಕೆ ಕಾರಣವೇನೆಂದು ನಮಗೆ ಗೊತ್ತಿಲ್ಲ. ಆದರೆ ಬಹಳ ಗಂಭೀರವಾದ ಒಂದು ಸುದ್ದಿ ನಮಗೆ ಬಂದಿದೆ. ಅದು ಏನೆಂದರೆ, ಇವತ್ತು ಕಾಂಗ್ರೆಸ್(ಐ) ಲೆಜಿಸ್ಲೇಟಿವ್ ಪಾರ್ಟಿಮೀಟಿಂಗ್‌ನಲ್ಲಿ

"Acrimonious scenes were witnessed in the Congress Legislature Party meeting. The Chief Minister abruptly walked out..."

(Interruptions)

ಶ್ರೀ ಎಸ್.ಎಂ. ಕೃಷ್ಣ :- ಮಾನ್ಯ ಅಧ್ಯಕ್ಷರೇ,...

ಅಧ್ಯಕ್ಷರು :- ಅವರು ಕ್ರಿಯಾಲೋಪ ಎತ್ತಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ :- ನಾನು ತಿಳಿದಿದ್ದೆ ನಿಲುವಳಿ ಸೂಚನೆ ಬಹಳ ಗಂಭೀರವಾದ ವಿಚಾರ. ಮಾನ್ಯ ವಿರೋಧ ಪಕ್ಷದ ನಾಯಕರು...

ಶ್ರೀ ಆರ್.ವಿ.ದೇಶಪಾಂಡೆ :- ನಿಮಗೆ ಕನಸಿನಲ್ಲೂ ಇದೇನೇ...

ಶ್ರೀ ಎಸ್.ಎಂ. ಕೃಷ್ಣ :- ನನಗೆ ಕನಸೇ ಬೀಳುವುದಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ :- ಹಾಗಾದರೆ ನೀವು ನಿದ್ದೆಯನ್ನೇ ಮಾಡುವುದಿಲ್ಲ. ನಾನು ಇವತ್ತು ಏನು ಹೇಳುತ್ತಿದ್ದೇನೆ ಎಂದರೆ, ಮಾನ್ಯ ವೀರಪ್ಪ ಮೊಯಿಲಿಯವರು ತಮ್ಮ ಲೈಫ್ ಮೇಲೆ ಆಟೆಂಪ್ಟ್ ಆಗಿದೆ ಎಂದು ಹೇಳಿದ್ದಾರೆ. ಕಾಂಗ್ರೆಸ್(ಐ) ಲೆಜಿಸ್ಲೇಚರ್ ಪಾರ್ಟಿ ಮೀಟಿಂಗ್ ಆದನಂತರ ಪುನಃ ಮೀಟಿಂಗ್ ನಡೆಯಿತು. ಶ್ರೀ ವೀರಪ್ಪ ಮೊಯಿಲಿಯವರು ನಮ್ಮ ಲೀಡರ್ ಅಲ್ಲ, ಅವರಲ್ಲಿ ನಮಗೆ ವಿಶ್ವಾಸ ಇಲ್ಲ, ಅವರನ್ನು ಬದಲಾವಣೆ ಮಾಡಬೇಕು ಎಂದು ರೆಸಲ್ಯೂಷನ್ ಮಾಡಿದ್ದಾರೆ. ನಾನು ಕೇಳುತ್ತಿದ್ದೇನೆ, ಮಾನ್ಯ ವೀರಪ್ಪ ಮೊಯಿಲಿಯವರು ಈ ಸದನದಲ್ಲಿ ಇಲ್ಲ. ಇವತ್ತು ಅವರು ನಿಮ್ಮ ಲೀಡರ್ ಆಗಿ ಉಳಿದಿದ್ದಾರೋ ಇಲ್ಲವೋ? ಇದು ಬಹಳ ಗಂಭೀರವಾದ ಪ್ರಶ್ನೆ. ಏಕೆಂದರೆ, ಮುಖ್ಯಮಂತ್ರಿಗಳೇಹೇಳಿದ್ದಾರೆ Later Mr.Moily talking to newsmen regretted at the unhappy incidents and clarified that he wouuld not allow knife and dagger culture..."

(Interruptions)

SRI R.V. DESHAPANDE: We cannot tolerate this. I should be allowed to make my submission.

ಶ್ರೀ ಜಿ. ರಾಜುಗೌಡ :- ಮಾನ್ಯ ಅಧ್ಯಕ್ಷರೆ ನನ್ನದು ಕ್ರಿಯಾಲೋಪ ಇದೆ.

(Interruptions)

ಅಧ್ಯಕ್ಷರು :- ರಾಮಯ್ಯನವರು ಮಾತನಾಡಲಿ.

(ಗೊಂದಲ)

SRI R.V.DESHPANDE: I should be allowed to make my submission. ಸರ್ಕಾರ ಇದೆಯೇ ಇಲ್ಲವೇ ಎಂಬುದು ನಮಗೆ ಬೇಕಾಗಿದೆ. ಇಲ್ಲಿ ಮುಖ್ಯಮಂತ್ರಿಗಳು, ಸಭಾ ನಾಯಕರು ಇಲ್ಲ. ನಮಗೆ ಅದು ಬೇಕಾಗಿದೆ. "Later Mr. Moily talking to Newsmen regretted at the unhappy incidents and clarified that he would not allow the knife and dagger culture to be revived in Karnataka and even prepared to sacrifice his life to prevent it."

ಹಾಗಾದರೆ ಕಾಂಗ್ರೆಸ್(ಐ) ಶಾಸಕಾಂಗ ಪಕ್ಷದ ಮೀಟಿಂಗ್‌ನಲ್ಲಿ ನೈಫ್, ಡ್ಯಾಗರ್ಸ್ ಯೂಸ್ ಆಗಿದೆ. ಇದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಇದು ನಮಗೆ ಗೊತ್ತಾಗಬೇಕಾಗಿದೆ. ಇಂದು ಈ ಸರ್ಕಾರ ಇರಬಹುದು. ನಾಳೆ ಮತ್ತೊಬ್ಬರು ಇರಬಹುದು. Nobody has the right to use knives and daggers. When the Chief Minister has said that his life was in danger, when there was an attempt on his life, the entire House is concerned about it. The House wants to know as to what has happened in the C.L.P.meeting, whether he continues to be your Leader or whether a no-confidence motion has been passed against him, Who are the persons who used knives and daggers and what action the Government wants to take against those people in case the knives and daggers have been used.

ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದ ಹಾಗೆ ಇದು ಗಂಭೀರವಾದ ಸಮಸ್ಯೆ. ಅದು ನನಗೆ ಗೊತ್ತು. ಹೆಚ್ಚು ಟೈಮ್ ತೆಗೆದುಕೊಳ್ಳಬೇಕು, ಆಟ ಆಡಬೇಕೆಂದು ನಾನು ಮಾತನಾಡುತ್ತಿಲ್ಲ. This is a serious matter. When there is an attempt on the life of the Chief Minister, the entire House is concerned with it. We want the Hon'ble Chief Minister to come to the House. Until he comes, let us not go ahead with any business.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ :- ಅವರು ನಾಯಕರಾಗಿದ್ದಾರೋ ಇಲ್ಲವೋ ಎನ್ನುವುದು ಗೊತ್ತಾಗಬೇಕು.

SRI D.B.CHANDRE GOWDA:- My point is, there is a constitutional crisis in the State which cannot be ignored by this House when it is in sitting. ಸದನ ನಡೆಯುತ್ತಿರತಕ್ಕ ಕಾಲದಲ್ಲಿ, ಇಂತಹ ಒಂದು ಸಂವಿಧಾನಾತ್ಮಕ ಕ್ರೈಸಿಸ್ ನಿರ್ಮಾಣವಾದಾಗ ಇದು ಸದನಕ್ಕೆ ಗಂಭೀರ ಅಲ್ಲವೆಂದು ಹೇಳಿದರೆ, ಇದಕ್ಕಿಂತ ಗಂಭೀರವಾದ ಸಮಸ್ಯೆ ಯಾವುದು ಎಂದು ನನಗೆ ಅರ್ಥವಾಗುವುದಿಲ್ಲ.Constitutionally, whether there is a leader elected to this House? If he is so whether he has the confidence of the Ruling Party? This is the fundamental question. If not, whether the Constitutional authorities of the State or the nation have taken notice of this? If they have taken notice of it, whether a communication has been reached? ಆ ವಿಚಾರಗಳ ಬಗ್ಗೆ,ನಾನು ಮುಖ್ಯಮಂತ್ರಿಗಳನ್ನು, ಅಲ್ಲಿ ಹೇಳಿದ್ದಲ್ಲ, I am - trying to quote his own statement, not anybody else's statement, from the horse's mouth what he has said. I quote: "It is most unfortunate and

highly condemnable that some Members indulged in violence at the meeting of the C.L.P. this morning and destroyed the property by breaking cups, saucers, glasses, chains, microphones. My heart bleeds to witness such ugly incidents and violenve indulged in by a few Members who had come prepared for creating such disorder and violence. I apologise to the people of Karnataka for such misbehaviour by a few members. Every step will be taken to curb such violence and indiscipline and unruly behaviour within the party forum. Such behaviour is against the Congress culture and my culture. In order to avoid further ugly incidents, I am postponing the meeting of the C.L.P. The action of few Legislators in holding subsequent meetings is the height of indiscipline and against the rules of the C.L.P. Necessary steps will be taken to prevent any indiscipline of this nature. ಆದಕ್ಕಾಗಿ ನಾನು ಇಲ್ಲಿ ಹೇಳಿದೆ. ಸಂವಿಧಾನಾತ್ಮಕ ಕ್ರೈಸಿಸ್ ನಿರ್ಮಾಣವಾಗಿದೆ. ಆಳುವ ಪಕ್ಷದಲ್ಲಿ ಒಂದು ಭಾಗ, ಮುಖ್ಯಮಂತ್ರಿಗಳು, ತಾನು ಸಭೆ ಅಡ್ಜರ್ನ್ ಮಾಡಿದ್ದೇನೆಂದು ಹೇಳಿದ್ದಾರೆ. ಇನ್ನೊಂದು ಗುಂಪಿನವರು ಸಭೆ ಅಡ್ಜರ್ನ್ ಆಗಲಿಲ್ಲ, ಮುಖ್ಯಮಂತ್ರಿಗಳು ಇಲ್ಲದೇ ಸಭೆ ನಡೆಯಿತು ಎಂದು ಹೇಳಿದ್ದಾರೆ. ಆ ಸಭೆಯಲ್ಲಿ 132 ಜನ ಸದಸ್ಯರು ಇದ್ದರೆಂದೂ ಹೇಳಿದ್ದಾರೆ. ಈ 132 ಜನ ಸದಸ್ಯರು ಮುಖ್ಯಮಂತ್ರಿಗಳ ಮೇಲೆ ವಿಶ್ವಾಸ ಇಲ್ಲವೆನ್ನುವ ಸ್ಪಷ್ಟವಾದ ಠರಾವು ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಪೂರಕವಾಗಿ ಮುಖ್ಯಮಂತ್ರಿಗಳ ಹೇಳಿಕೆ ಇದೆ. ಆದ್ದರಿಂದ ಸಭೆ ನಡೆಸುವುದಕ್ಕೆ ಮುನ್ನ Unless this Constitutional Crisis is resolved. ನಾವು ಈ ಸಭೆ ನಡೆಸುವುದರಲ್ಲಿ ಅರ್ಥ ಇಲ್ಲ. ಆ ಕಾರಣ ಇದರ ಬಗ್ಗೆ ನಮಗೆ ಮುಖ್ಯಮಂತ್ರಿಗಳಿಂದ ಅಥವಾ ಸಭಾ ನಾಯಕರಿಂದ ಸ್ಪಷ್ಟನೆ ಬೇಕಾಗಿದೆ. ಮುಖ್ಯಮಂತ್ರಿಗಳಾಗಿ ಅವರು ಹೇಳುತ್ತಾರೋ ಬಿಡುತ್ತಾರೋ- It is none of our concern. As Leader of the House, he is accountable to this House about his own position. ಇದು ಯಾವುದೂ ಗೃಹಕೃತ್ಯ ಅಲ್ಲ. ರಾಜ್ಯ ನಡೆಸತಕ್ಕ ಕೃತ್ಯ, ಸದನ ನಡೆಸತಕ್ಕ ಕೃತ್ಯ. ಆದ್ದರಿಂದ ಮಾನ್ಯ ಉಪ ಮುಖ್ಯಮಂತ್ರಿಗಳು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, That is the reason, I say there is a constitutional crisis. Again I say, keeping this Constitutional crisis, we cannot run this House. Whether there is a Government or not? If there is a Government, there should be a leader. Who is the Leader of the House today? Whether it is Mr. Veerappa Moily or whether the Legislature Party has chosen anybody else as its Leader? If anybody else has been chosen as the Leader, whether the present Chief Minister has submitted his resignation? All these things are very

relevant, so far as running of this House is concerned, I humbly submit, let the Leader come and explain to this House about his position and till such time, there is no point in arguing the matter. This is my submission.

ಶ್ರೀ ವಾಟಾಳ್ ನಾಗರಾಜ್ :- ಒಂದು ಪ್ರಮುಖವಾದ ಪ್ರಶ್ನೆ. ಮುಖ್ಯಮಂತ್ರಿಗಳ ಹೇಳಿಕೆ ಜೊತೆಗೆ.....

(ಗೊಂದಲ)

ಶ್ರೀ ಎಸ್.ಹೆಚ್.ಕೌಜಲಗಿ :- ತಾವು ಕುರ್ಚಿ ಮುರಿದಿದ್ದು, ಕಪ್ಪು ಸಾಸರ್ ಹೊಡೆದಿದ್ದು, ತಮ್ಮ ಕಸ್ಟಡಿಯಲ್ಲಿರತಕ್ಕ ಪ್ರೆಮಿಸಿಸ್‌ನಲ್ಲಿ ನಡೆದಿದ್ದು. ಈ ಪ್ರೆಮಿಸಸ್‌ನಲ್ಲಿ ಅದಾಗ, ಕೂಡಲೇ ಕ್ರಮ ತೆಗೆದುಕೊಳ್ಳುವುದು ತಮ್ಮ ಕರ್ತವ್ಯ. ಏಕೆಂದರೆ, ಇವತ್ತಿನದಿವಸ ಅವರು ತಮ್ಮ ನಜರಿಗೆ ತಂದಿದ್ದಾರೆ. ಇದರ ಬಗ್ಗೆ ಚೀಫ್ ಮಿನಿಸ್ಟರು ಏನು ಮಾಡಿದ್ದಾರೆ. ಅವರು ಚೀಫ್ ಮಿನಿಸ್ಟರ್ ಅಲ್ಲವೆಂದು 120 ಶಾಸಕರು ಸಬ್ಸೀಕ್ವೆಂಟ್ಲಿ ಮೀಟಿಂಗ್ ಮಾಡಿದ್ದಾರೆ. ಮೀಟಿಂಗ್ ಮಾಡಿ they have elected a Leader. When they have elected a Leader, ಇವತ್ತಿನ ದಿವಸ ಅದರ ಬಗ್ಗೆ ಚೀಫ್ ಮಿನಿಸ್ಟರ್ ಇಲ್ಲಿಗೆ ಬಂದು ಹೇಳಬೇಕು. ಯಾರು ಹೌಸ್ ಲೀಡರ್ ಇದ್ದಾರೆ? ಅದರ ಬಗ್ಗೆ ಕ್ಲಾರಿಫೈ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಇದನ್ನು ಅಷ್ಟು ಲಘುವಾಗಿ ತೀರ್ಮಾನ ಮಾಡತಕ್ಕಂಥಾದ್ದಾಗಲೀ ಸರಿಯಲ್ಲ. ಇದು ಬಹಳ ಗಂಭೀರವಾದ ಪರಿಸ್ಥಿತಿ. ಕರ್ನಾಟಕದ ಇತಿಹಾಸದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದಲ್ಲಿ ಇವತ್ತು ಬೆಳಿಗ್ಗೆ ನಡೆದಿರತಕ್ಕಂಥ ಪರಿಸ್ಥಿತಿಯನ್ನು ಅವಲೋಕಿಸಿದಾಗ ಈ ರಾಜ್ಯದಲ್ಲಿ ಸುಭದ್ರವಾದ ಸರ್ಕಾರ ಇಲ್ಲ ಎನ್ನುವ ತೀರ್ಮಾನಕ್ಕೆ ನಾವು ಬರಬೇಕಾಗಿದೆ. ಇವತ್ತು ಎರಡು ಗುಂಪಾಗಿದೆ. ಎರಡು ಗುಂಪಿನಲ್ಲಿ ಮುಖ್ಯ ಮಂತ್ರಿಗಳು ಸಭೆಯಿಂದ ಹೊರಗಡೆ ಎದ್ದುಹೋಗಿದ್ದಾರೆ. ಮುಖ್ಯ ಮಂತ್ರಿಗಳು ಹೋದ ನಂತರ ಮತ್ತೊಬ್ಬರು ಅವರ ಸ್ಥಾನದಲ್ಲಿ ಕುಳಿತು ಸಭೆ ನಡೆಸಿ ನಿರ್ಣಯ ಮಾಡಿ, ನಮಗೆ ಇಷ್ಟು ಬೆಂಬಲವಿದೆ ಎಂದು ತೋರಿಸಿದ್ದಾರೆ. ಈ ಪರಿಸ್ಥಿತಿ ಇರುವಾಗ ಯಾರು ಮುಖ್ಯ ಮಂತ್ರಿಗಳೆಂದು ನಿರ್ಧಾರವಾಗಬೇಕಾದುದು ಅತಿ ಮುಖ್ಯ. ಮತ್ತೆ ಅತಿ ಮುಖ್ಯವಾಗಿ ತಮಗೆ ಹೇಳಬೇಕಾದರೆ 8 ಜನ ಶಾಸಕರನ್ನು ತಮ್ಮ ಕಾಂಗ್ರೆಸ್ ಶಾಸಕಾಂಗ ಪಕ್ಷದಿಂದ ಹೊರಗೆ ಹಾಕಿದ್ದಾರೆ. 8 ಜನರನ್ನು ಸಸ್ಪೆಂಡ್ ಮಾಡಿದ್ದಾರೆ. ಕಾರಣ ಏನು? ಅವರು ಮೈ ಮೇಲೆ ಬಂದರು, ಹೊಡೆಯುವುದಕ್ಕೆ ಬಂದರು, ಕುರ್ಚಿಗಳನ್ನು ಎಸೆದರು, ಗೂಂಡಾಗಿರಿ ಮಾಡಿದರು ಎಂದು ಹೇಳಿ ಮಾಡಿರತಕ್ಕಂಥಾದ್ದು. ಕೊಲೆ ಮಾಡುವುದಕ್ಕೆ ಬಂದರು ಎನ್ನುವ ಮಟ್ಟಕ್ಕೆ ಇದು ಹೋಗಿದೆ. ಇದನ್ನು ಲಘುವಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದರ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕು. ಸಮಗ್ರ ನ್ಯಾಯಾಂಗ ತನಿಖೆಯಾಗಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಇದು ಕಡಿಮೆ ಏನಲ್ಲ. ಈ ರೀತಿ ನಡೆಯುವುದಾದರೆ ಈ ಸಭೆಯಲ್ಲಿ ನಾವೂ ಇರುವುದಕ್ಕಾಗುವುದಿಲ್ಲ, ಯಾರೂ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಮತ್ತೆ ಈ ಸಭೆಯ ಔಚಿತ್ಯದ ಬಗ್ಗೆಯೂ ನಾನು ಹೇಳುತ್ತಿದ್ದೇನೆ. ಮುಖ್ಯ ಮಂತ್ರಿಗಳು ಇಲ್ಲವೇನೋ ಅನ್ನುವ ಹಾಗಾಗಿದೆ. ತಕ್ಷಣಕ್ಕೆ ಮುಖ್ಯ ಮಂತ್ರಿಗಳು ಈ ರಾಜ್ಯದಲ್ಲಿ ಇಲ್ಲ, ಸಭಾನಾಯಕರು ಇಲ್ಲಿ ಇಲ್ಲ ಎನ್ನತಕ್ಕಂಥ ಪ್ರಶ್ನೆ ಇವತ್ತು

ಉದ್ಭವವಾಗಿದೆ. ಆದ್ದರಿಂದ ಸಭಾ ನಾಯಕರು ಯಾರು ಎಂದು ತೀರ್ಮಾನವಾಗಬೇಕು. ಈಗ ಸಭಾನಾಯಕರು ವೀರಪ್ಪಮೊಯಿಲಿಯವರು ಎಂದು ನಾವು ಅಂದುಕೊಂಡಿದ್ದೇವೆ. ಅವರು ಇಲ್ಲ ಎಂದು ಹೇಳುತ್ತಿದ್ದಾರೆ. ಅವರನ್ನು ಕರೆಸಿ ಯಾರು ಎಂದು ಹೇಳಬೇಕು. ಬಹಳ ಮೌನವಾಗಿ ಪ್ರೇಕ್ಷಕರಾಗಿ ಕುಳಿತಿರತಕ್ಕಂಥ ಈ ಮುಂದಿನ ಮಹನೀಯರುಗಳು ತಾವು ಏನಾಗಿದ್ದೀರಿ? ತಮ್ಮ ಪರಿಸ್ಥಿತಿ ಏನು? ನೀವು ಏನಾಗಿದ್ದೀರಿ ಎಂದಾದರೂ ನಮಗೆ ಹೇಳಬೇಕಲ್ಲಾ?

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ನಾವು ಬಹಳ ಗಹನವಾದ ವಿಚಾರವನ್ನು ಈ ಸಭೆಯಲ್ಲಿ ಚರ್ಚೆ ಮಾಡುತ್ತಿದ್ದೇವೆ. ನಮಗೆ ಈ ರಾಜ್ಯದ ಜನತೆಯ ಮತ್ತು ರೈತರ ಚಿಂತೆ. ಇವರಿಗೆ ಕಿತ್ತಾಟದ ಚಿಂತೆ, ಕಚ್ಚಾಟದ ಚಿಂತೆ, ಅಧಿಕಾರದ ಚಿಂತೆಯಾಗಿದೆ. ಅದು ಅವರಿಗೆ ಬಿಟ್ಟಿರತಕ್ಕಂಥಾದ್ದು. ಇವತ್ತು ನೋಡಿದರೆ ಕಾಂಗ್ರೆಸ್ ಪಕ್ಷಕ್ಕೆ ಜನರ ಮತ್ತು ರಾಜ್ಯದ ರೈತರ ಚಿಂತೆ ಬೇಕಾಗಿಲ್ಲ, ಅವರದೇ ಚಿಂತೆಯಾಗಿದೆ. ಅವರು ಚಿಂತೆ ಮಾಡಿಕೊಂಡಿರಲಿ. ಅದನ್ನು ಮುಂದುವರಿಸಿಕೊಂಡು ಹೋಗುವುದಾದರೆ ಮುಂದುವರಿಸಿಕೊಂಡು ಹೋಗಲಿ. ಎರಡನೆಯದು ಒಬ್ಬ ಮುಖ್ಯ ಮಂತ್ರಿಗೆ ಅವರ ಜೀವಕ್ಕೆ ಅಪಾಯ ಬಂದಿದೆ, ಅವರು ಇವತ್ತು ಮುಖ್ಯಮಂತ್ರಿಗಳಾಗಿಲ್ಲ. ಇವತ್ತು ರಾಜ್ಯದ ಗೃಹ ಸಚಿವರೂ ಕೂಡಾ ಅವರೇ ಆಗಿದ್ದಾರೆ. ಗೃಹ ಸಚಿವರಾಗಿರತಕ್ಕಂಥವರಿಗೇ ಇವತ್ತಿನ ದಿವಸ ರಕ್ಷಣೆ ಇಲ್ಲ. ಅವರ ಪಕ್ಷದ ಸಭೆಯಲ್ಲೇ ಅವರ ಜೀವಕ್ಕೆ ಹಾನಿಯಾಗತಕ್ಕಂಥ ಪರಿಸ್ಥಿತಿ ಇವತ್ತು ರಾಜ್ಯದಲ್ಲಿ ಉದ್ಭವವಾಗಿದೆ. ಅವರಿಗೇ ರಕ್ಷಣೆ ಇಲ್ಲದ ಮೇಲೆ ಈ ರಾಜ್ಯದ ಜನತೆಗೆ ಎಷ್ಟರಮಟ್ಟಿಗೆ ಈ ಸರ್ಕಾರ ರಕ್ಷಣೆ ಕೊಡುತ್ತದೆ? ಇದು ಇವತ್ತಿನ ದಿವಸ ತೀರ್ಮಾನವಾಗಬೇಕಾಗಿದೆ. ರಾಜ್ಯದ ಜನತೆಗೆ ರಕ್ಷಣೆ ಇದೆಯೇ ಇಲ್ಲವೇ ಎಂದು ಇವತ್ತಿನ ದಿವಸ ತೀರ್ಮಾನವಾಗಬೇಕಾಗಿದೆ. ಮತ್ತು ಅವರ ನಾಯಕತ್ವದಲ್ಲಿ ವಿಶ್ವಾಸವಿಲ್ಲವೆಂದು ಅವರ ಪಕ್ಷದಲ್ಲಿ ನಿರ್ಣಯವಾಗಿ ಒಪ್ಪಿಗೆಯಾಗಿದೆ. 130 ಜನ ಶಾಸಕರು ಸೇರಿಕೊಂಡು ಅವರಲ್ಲಿ ನಮಗೆ ನಂಬಿಕೆ ಇಲ್ಲ, ಅವರನ್ನು ತೆಗೆದುಹಾಕಿದ್ದೇವೆಂದು ಹೇಳಿದ್ದಾರೆ. ಇವತ್ತು ನಾವು ಏನು ಚರ್ಚೆ ಮಾಡುವುದಕ್ಕೆ ಹೊರಡುತ್ತಿದ್ದೇವೆ. ಈ ಚರ್ಚೆಗೆ ಇವತ್ತು ಯಾರು ಉತ್ತರ ಕೊಡುವುದು?ಸರ್ಕಾರ ಇದ್ದರೆ ತಾನೇ ಉತ್ತರ ಕೊಡುವುದು? ಒಬ್ಬ ನಾಯಕರ ಮೇಲೆ ವಿಶ್ವಾಸ ಇಲ್ಲವೆಂದಾದ, ಮೇಲೆ ನಮ್ಮ ಚರ್ಚೆಗೆ ಉತ್ತರ ಕೊಡತಕ್ಕಂಥವರು ಯಾರು? ಆದ್ದರಿಂದ ಇದರ ಬಗ್ಗೆ ಇವತ್ತಿನ ದಿವಸ ತೀರ್ಮಾನವಾಗಬೇಕಾಗಿದೆ. ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ಇದ್ದರೆ, ಇಲ್ಲಿಯವರೆಗೆ ಅವರು ಮುಖ್ಯ ಮಂತ್ರಿಗಳಾಗಿ ಉಳಿದಿದ್ದರೆ, ಅವರು ದಯವಿಟ್ಟು ಬಂದು ಈ ಸಭೆಗೆ ಮತ್ತು ರಾಜ್ಯದ ಜನತೆಗೆ ವಿವರಣೆ ಕೊಡಬೇಕಾದ ಅವಶ್ಯಕತೆ ಇದೆ. ಅವರು ಇನ್ನೂ ಮುಖ್ಯ ಮಂತ್ರಿಗಳಾಗಿ ಉಳಿದಿದ್ದರೆ ದಯವಿಟ್ಟು ಅವರನ್ನು ತಕ್ಷಣ ಈ ಸಭೆಗೆ ಕರೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ನಾನು ಬೆಳಿಗ್ಗೆ ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಉಪ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾ, ಬಹಳ ಗಂಭೀರವಾಗಿರತಕ್ಕಂಥ ಮತ್ತು ರಾಜ್ಯಕ್ಕೆ ಸಂಬಂಧಪಟ್ಟಂಥ ಕಾವೇರಿ ವಿವಾದವನ್ನು ನಾವು ಚರ್ಚೆ ಮಾಡುತ್ತಿದ್ದೇವೆ, ಆದ್ದರಿಂದ ಬೇರೆ ಕಡೆಗಮನ ಸೆಳೆಯುವುದಕ್ಕೆ ನೀವು ಪ್ರಯತ್ನ ಮಾಡಬೇಡಿ ಎನ್ನತಕ್ಕಂಥ ಮಾತನ್ನು ಹೇಳಿದರು. ಆದ್ದರಿಂದ ನಾನೂ ಸಹ ಆ ಸಂದರ್ಭದಲ್ಲಿ ಸುಮ್ಮನೆ

ಕುಳಿತುಕೊಳ್ಳತಕ್ಕಂಥ ಪ್ರಸಂಗ ಬಂತು. ಏಕೆಂದರೆ, ಇವತ್ತು ವರದಿಯಾಗಿರತಕ್ಕಂಥ ವಿಚಾರ. ನಾವೆಲ್ಲರೂ ನಂಬಿಕೆ ಇಟ್ಟಿರತಕ್ಕಂಥ ಪತ್ರಿಕಾ ಮಾಧ್ಯಮದ ಮುಖಾಂತರ ವರದಿಯಾಗಿರತಕ್ಕಂಥ ವಿಚಾರ. ಮಾನ್ಯ ಚಂದ್ರೇಗೌಡರು ಹೇಳಿದ ಹಾಗೆ ಇವತ್ತು ಉದ್ಭವವಾಗಿರುವುದು ಸಂವಿಧಾನದ ಬಿಕ್ಕಟ್ಟು. ಇವತ್ತು ಸರ್ಕಾರ ಇದೆಯೇ? 132 ಜನ ಶಾಸಕರ ಬೆಂಬವಲವನ್ನು ಕಳೆದುಕೊಂಡ ಮೇಲೆ ಅರ್ಧ ಕ್ಷಣವೂ ಸಹ ಅವರು ಮುಖ್ಯಮಂತ್ರಿಗಳಾಗಿ ಇರಲಿಕ್ಕೆ ಸಾಧ್ಯವಿಲ್ಲ. ಈ ಸರ್ಕಾರ ಹೋಗುತ್ತದೆ. ಇವರ ಕಿತ್ತಾಟದಿಂದಾಗಿ ರಾಜ್ಯಪಾಲರು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. 132 ಜನ ಶಾಸಕರು ಇವರಿಗೆ ಬೆಂಬಲ ವಾಪಸ್ ತೆಗೆದುಕೊಂಡಿದ್ದಾರೆಂದರೆ, ವಿರೋಧ ಪಕ್ಷದಲ್ಲಿ ನಾವು ಕುಳಿತುಕೊಂಡು ಈ ಸರ್ಕಾರವನ್ನು ಮುಂದುವರಿಯಲು ಬಿಡಲಿಕ್ಕೂ ಆಗುವುದಿಲ್ಲ. ರಾಜ್ಯಪಾಲರ ಹತ್ತಿರ ಹೋಗಿ ಇವರನ್ನು ತೆಗೆದು ಹಾಕಿ ಎಂದು ಹೇಳಬೇಕಾಗುತ್ತದೆ. ಇವರ ಪಕ್ಷದ ಆಂತರಿಕ ವಿಚಾರದಲ್ಲಿ ತಲೆ ಹಾಕಲಿಕ್ಕೆ ನಮಗೆ ಯಾರಿಗೂ ಸಹಾ ಇಷ್ಟ ಇಲ್ಲ. ಮುಖ್ಯ ಮಂತ್ರಿಗಳು ಈ ಸಭೆಗೆ ಬರುತ್ತಿದ್ದಾರೆ.

(ಮಾನ್ಯ ಮುಖ್ಯ ಮಂತ್ರಿಗಳು ಸಭೆಗೆ ಬಂದರು)

ಆದ್ದರಿಂದಾಗಿ ನಾವು ಮುಖ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತಿದ್ದೇವೆ. ನೀವು ಸಭಾ ನಾಯಕರಾಗಿ ಉಳಿದಿದ್ದೀರಾ? ಮುಖ್ಯಮಂತ್ರಿಗಳಾಗಿ ಉಳಿದಿದ್ದೀರಾ? ನಿಮಗೆ ಬೆಂಬಲ ಇದೆಯೇ? ನೀವು ಮುಖ್ಯ ಮಂತ್ರಿಗಳಾಗಿ ಮುಂದುವರಿಯಬೇಕಾದರೆ ನಿಮಗೆ 124 ಶಾಸಕರಿಗಿಂಥ ಹೆಚ್ಚು ಬೆಂಬಲ ಇರಬೇಕಾಗುತ್ತದೆ. ಆ ಬೆಂಬಲ ಇದೆಯೇ? ಅದನ್ನು ಸಾಬೀತು ಮಾಡಿ ತೋರಿಸಿ ಎಂದು ನಾವು ಕೇಳುತ್ತಿದ್ದೇವೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ರಾಜ್ಯಾಂಗ ಕ್ರೈಸಿಸ್, ಬಿಕ್ಕಟ್ಟು ಉಂಟಾಗಿದೆ ಎಂದು ಹೇಳಿದ್ದಾರೆ. ಸರ್ಕಾರ ಇದೆಯೇ ಎನ್ನುವ ಪ್ರಶ್ನೆ ಕೇಳಿದ್ದಾರೆ. ಮುಖ್ಯ ಮಂತ್ರಿ ಇದ್ದಾರೆಯೇ ಎನ್ನುವ ಪ್ರಶ್ನೆ ಕೇಳಿದ್ದಾರೆ. ಈ ಮೂರಕ್ಕೂ ಕೂಡ ಉತ್ತರ, ಸರ್ಕಾರ ಭದ್ರವಾಗಿದೆ, ಮುಖ್ಯ ಮಂತ್ರಿಗಳೂ ಇದ್ದಾರೆ. ಉಪ ಮುಖ್ಯ ಮಂತ್ರಿಗಳೂ ಇದ್ದಾರೆ. ಮಂತ್ರಿ ಮಂಡಲದ ಎಲ್ಲರೂ ಇದ್ದಾರೆ. ಶಾಸನ ಸಭೆಯೂ ಇದೆ. ಆದ್ದರಿಂದ ರಾಜ್ಯಾಂಗದ ಬಿಕ್ಕಟ್ಟು ಯಾವುದೂ ಉದ್ಭವಿಸುತ್ತಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೇ, ಇಷ್ಟು ಹಗುರವಾಗಿ ಉತ್ತರ ಕೊಡಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ there has been a constitutional crisis. ಮಾನ್ಯ ಮುಖ್ಯ ಮಂತ್ರಿಗಳು ಸ್ವತಃ ಹೇಳಿಕೆ ಕೊಟ್ಟಿದ್ದಾರೆ, ತನ್ನ ಲೈಫ್ ಮೇಲೆ ಅಟೆಮ್ಪ್ ಆಗಿದೆ ಎಂದು ಹೇಳಿದ್ದಾರೆ. ಚಾಕು, ಚೂರಿ ಸಂಸ್ಕೃತಿ ಮುರಿಯುತ್ತೇನೆಂದು ಹೇಳಿದ್ದಾರೆ. ಇವತ್ತು ಚಿಕ್ಕೇಗೌಡರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಭೆ ಆಗಿ ಮುಖ್ಯ ಮಂತ್ರಿಗಳ ಮೇಲೆ ಅವಿಶ್ವಾಸ ಇದೆ, ನಾಯಕತ್ವ ಬದಲಾವಣೆಯಾಗಬೇಕೆಂದು ಹೇಳಿದ್ದಾರೆ. ಮುಖ್ಯಮಂತ್ರಿಗಳು He has said "I am prepared to sacrifice my life." ಎಂದು ಹೇಳಿದ್ದಾರೆ.There is a constitutional crisis. The meeting was held under the presidentship of Sri Chikke Gowda. We are concerned about the life of the Chief Minister and none else.

ಶ್ರೀ ವಾಟಾಳ್‌ನಾಗರಾಜ್: ಮುಖ್ಯ ಮಂತ್ರಿಗಳ ಹೇಳಿಕೆಯಲ್ಲೇ ಅನಾಯಕತ್ವ ಎಂದು ಹೇಳಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ: ಮುಖ್ಯ ಮಂತ್ರಿಗಳು, ತನ್ನ ಲೈಫ್ ಮೇಲೆ ಅಟೆಮ್ಪ್ ಆಗಿದೆಯೆಂದು ಹೇಳಿದ್ದಾರೆ. ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಆದ ಗಲಾಟೆಯನ್ನು ಪ್ರಸ್ತಾಪ ಮಾಡಿದ್ದಾರೆ ಗ್ಲಾಸ್ ಮತ್ತು ಸಾಸರ್ ಒಡೆದಿರುವ ಬಗ್ಗೆಯೂ ಪ್ರಸ್ತಾಪ ಮಾಡಿದ್ದಾರೆ. ಇದು ಆಗಬಾರದಾಗಿತ್ತೆಂದು ನಾಡಿನ ಜನರ ಕ್ಷಮೆಯನ್ನೂ ಕೇಳಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೇಳಬೇಕಾಗುತ್ತದೆ. ತಾವು ಇನ್ನೂ ನಾಯಕರಾಗಿ ಉಳಿದಿದ್ದೀರೋ ಇಲ್ಲವೋ? ಇವತ್ತು ಮುಖ್ಯ ಮಂತ್ರಿಗಳಿದ್ದಾರೆಂದು ಉಪ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅದು ಬೇರೆ ಪ್ರಶ್ನೆ. ಮುಖ್ಯ ಮಂತ್ರಿಗಳೇ ನಮಗೆ ಹೇಳಬೇಕಾಗಿದೆ, ಆ ತರಹ ಪೇಪರ್ ಸ್ಟೇಟ್‌ಮೆಂಟ್ ಕೊಡಲಿಕ್ಕೆ ಏನು ಕಾರಣ ಇತ್ತು? ನಿಮ್ಮ ಲೈಫ್‌ಗೆ ಏನು ಡೇಂಜರ್ ಆಯಿತು? ಅಂಥವರ ವಿರುದ್ಧ ಏನು ಕ್ರಮ ತೆಗೆದುಕೊಂಡಿರಿ? ಅವರು ಶಾಸಕರಿರಲಿ ಅಥವಾ ಯಾರೇ ಇರಲಿ, if somebody has taken law into his hands, what action you have taken? That also, we want to know. To-day we are concerned about it. ಇವತ್ತು ಚೀಫ್ ಮಿನಿಸ್ಟರ್‌ಗೆ ಆಗಬಹುದು ನಾಳೆ ಡೆಪ್ಯೂಟಿ ಚೀಫ್ ಮಿನಿಸ್ಟರ್‌ಗೆ ಆಗಬಹುದು. ನಾಳೆ ರೆವಿನ್ಯೂ ಮಿನಿಸ್ಟರ್ ಮೇಲೆ ಅಟ್ಯಾಕ್ ಆಗಬಹುದು. ಅವರನ್ನು ಸಸ್ಪೆಂಡ್ ಮಾಡಿದ್ದೀರೋ ಬಿಟ್ಟಿದ್ದೀರೋ ಅದು ಬೇರೆ ವಿಷಯ. So, we are concerned about it. We want to know what action you have taken. Suspension, that is an internal matter, which I don't want to go. I want to know what legal action you have taken. We are all concerned about this. There is a constitutional crisis. When there is a danger to the life of the Chief Minister, we are also concerned. The Chief Minister has to explain as to what has happened in the Congress Legislature Party. About the discussions, we are not worried. There was an attempt. ಯಾರು ಅಟ್ಯಾಕ್ ಮಾಡಿದರು? ಕಾರಣ ಏನಾಯಿತು? ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿರಿ? ಪೋಲೀಸ್ ಕಂಪ್ಲೇಂಟ್ ಲಾಡ್ಜ್ ಮಾಡಿದ್ದೀರಾ? What action you have taken against these people? Whether they have been arrested by now? So, it is a serious matter. ಇದು ಒಂದು ಕಡೆ. ಮತ್ತೊಂದು ಕಡೆ ಮಾನ್ಯ ಮುಖ್ಯಮಂತ್ರಿಯವರು ಆಬ್ರಪ್ಟ್ ಹೋಗಿ ಬಿಟ್ಟರು. ಅದರ ನಂತರ ಮಾನ್ಯ ಚಿಕ್ಕೇಗೌಡರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಿತು. ಅದರಲ್ಲಿ ಇವರು ಹೈಕಮಾಂಡ್‌ಗೆ ಅಪೀಲ್ ಮಾಡಿದ್ದಾರೆ. ಮುಖ್ಯಮಂತ್ರಿಗಳ ಮೇಲೆ ನಮಗೆ ವಿಶ್ವಾಸವಿಲ್ಲ ಎಂದು... ಇದು ನಿಜವೇ? ಇದು ನಿಜವಾಗಿದ್ದರೆ ಆ ಮೀಟಿಂಗ್‌ನಲ್ಲಿ 132 ಜನರು ಇದ್ದು ಆ ಪ್ರಕಾರವಾಗಿ ರೆಸಲ್ಯೂಶನ್ ಆಗಿದೆಯೇ? ಒಂದು ವೇಳೆ ಆ ರೀತಿಯಲ್ಲಿ ರೆಸಲ್ಯೂಶನ್ ಆಗಿದ್ದರೆ ನಿಮಗೆ ಇಲ್ಲಿ ಮುಖ್ಯಮಂತ್ರಿಯಾಗಿ ಉಳಿಯುವ ಅರ್ಹತೆ ಇಲ್ಲ ಎಂದು ನಾನು ಹೇಳುತ್ತೇನೆ. ಹಾಗಾಗಿ ಇದರ ಮೇಲೆ ಬೆಳಕು ಚೆಲ್ಲುವ ಕರ್ತವ್ಯ ನಿಮ್ಮದ್ದಾಗಿದೆ. You

are the person who has given the statement to UNI. ಆದ್ದರಿಂದ ನಿಜವಾದ ಪರಿಸ್ಥಿತಿಯು ಏನು, ಇದರ ಬಗ್ಗೆ ನೀವು ಏನು ಕ್ರಮವನ್ನು ತೆಗೆದು ಕೊಂಡಿದ್ದಿರಿ, ಎನ್ನುವ ವಿಚಾರಗಳು ನಾಡಿನ ಜನರಿಗೆ ಗೊತ್ತಾಗಬೇಕಾಗಿದೆ. ಇದನ್ನು ಕೇವಲ ಇಲ್ಲಿ ಹೇಳಿದರೆ ಆಗುವುದಿಲ್ಲ. ನಿಮ್ಮ ಕಾಂಗ್ರೆಸ್ ಪಕ್ಷದಲ್ಲಿ ಏನು ನಡೆಯುತ್ತಾ ಇದೆ ಎಂಬುದು ನಮ್ಮ ಜನರಿಗೆ ಗೊತ್ತಾಗಬೇಕಾಗಿದೆ. ಅಧಿಕಾರದ ಸಲುವಾಗಿ ನಿಮ್ಮಲ್ಲಿ ಏನೇನು ನಡೆಯುತ್ತಾ ಇದೆ? ಇವೊತ್ತು ಕಾವೇರಿ ನೀರಿನಂಥ ದೊಡ್ಡ ಸಮಸ್ಯೆ ಬಗ್ಗೆ ನೀವು ಯಾರೂ ಇಲ್ಲ. ಆ ಬಗ್ಗೆ ಚಿಂತನೆ ನಿಮ್ಮಲ್ಲಿ ಇಲ್ಲ. ಆದರೆ ಅಧಿಕಾರದ ವಿಚಾರದಲ್ಲಿ ನೀವುಗಳು ಯಾವ ಮಟ್ಟಕ್ಕೆ ಹೋಗಿದ್ದೀರಿ ಎಂಬುದು ನಾಡಿನ ಜನರಿಗೆ ಗೋತ್ತಾಗ ಬೇಕಾಗಿದೆ . ಹಾಗಾಗಿ ತಾವುಗಳು ಇದರ ಬಗ್ಗೆ ಸ್ಪಷ್ಟನೆ ಕೊಡಬೇಕೆಂದು ಸಭಾನಾಯಕರಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ಕನ್ನಡದಲ್ಲಿ ಒಂದು ಗಾದೆಯನ್ನು ಹೇಳುತ್ತಾರೆ. ಅಜ್ಜಿಗೆ ಅರಿವೆಯ ಚಿಂತೆಯಾದರೆ ಮೊಮ್ಮಗಳಿಗೆ ಇನ್ನೇನೋ ಚಿಂತೆಯಂತೆ... ನಾನು ಅದರ ಬಗ್ಗೆ ಹೋಗುವುದಿಲ್ಲ. ನನಗೆ ಅಜ್ಜಿಯ ಚಿಂತೆಯೂ ಇಲ್ಲ ಅಥವಾ ಮೊಮ್ಮಗಳ ಚಿಂತೆಯಿಲ್ಲ. ನನ್ನ ಚಿಂತೆ ಏನೆಂದರೆ, ಮಾನ್ಯ ಮುಖ್ಯಮಂತ್ರಿಯವರು ಈ ರಾಜ್ಯದ ಜನತೆಯ ಕ್ಷಮೆ ಕೇಳುವ ಮಟ್ಟಕ್ಕೆ ಬಂದಿದ್ದರೆ, ಈ ಸ್ಥಿತಿಯನ್ನು ನಾವು ಏನೂ ಗಂಭೀರವಾಗಿ ಕಾಣುವುದಿಲ್ಲ, ನಮಗೆ ಎದುರಿಗೆ ಕಾಣುವುದಿಲ್ಲವೇ? ಮುಖ್ಯಮಂತ್ರಿಗಳು, ಉಪ-ಮುಖ್ಯಮಂತ್ರಿಗಳು, ಮಂತ್ರಿಮಂಡಳದ ಸದಸ್ಯರು ಎಷ್ಟು ಜನರಿದ್ದಾರೆ, ಅವರು ಏನು ಮಾಡಿದ್ದಾರೆ ಎಂಬ ಪ್ರಶ್ನೆಗೆ ನಾನು ಹೋಗುವುದಿಲ್ಲ. ಅಂಥವರೆಲ್ಲರೂ ನಮ್ಮ ದೃಷ್ಟಿಗೆ ಬೀಳುತ್ತಾರೆ. ಆದರೆ ರಾಜ್ಯಾಂಗದತ್ತವಾಗಿ ಅವರು ಇಲ್ಲಿದ್ದಾರೆಯೇ ಎಂಬ ಪ್ರಶ್ನೆ ನನ್ನದು. ಅವರು ರಾಜ್ಯಾಂಗಬದ್ಧವಾಗಿ ಯಾವಾಗ ಇರುತ್ತಾರೆ ಎಂದರೆ ಆಳುವ ಪಕ್ಷದ ಬಹುಮತದ ಜನರು ಅವರನ್ನು ನಾಯಕರು ಎಂದು ಒಪ್ಪಿಕೊಂಡಿದ್ದರೆ, ಅವರು ರಾಜ್ಯಾಂಗ ಬದ್ಧವಾಗಿ ಇರುವುದಕ್ಕೆ ಸಂವಿಧಾನಾತ್ಮಕವಾಗಿ ಇರುವುದಕ್ಕೆ ಸಾಧ್ಯವಾಗುತ್ತದೆ. ಮುಖ್ಯಮಂತ್ರಿಗಳ ಹೇಳಿಕೆಯ ಪ್ರಕಾರವೇ ಜನರ ಕ್ಷಮೆ ಕೇಳುವ ಮಟ್ಟಕ್ಕೆ ಹೋಗಿ ಕೊನೆಗೆ ಒಂದು ಮಾತನ್ನು ಹೇಳಿದ್ದಾರೆ."Necessary steps will be taken to prevent any indiscipline of this nature." ಈಗ ನಡೆದಿರತಕ್ಕಂಥಾದ್ದು ಒಂದು ಆದರೆ, ಮುಂದೆ ನಡೆಯತಕ್ಕಂಥಾದ್ದನ್ನು ತಡೆಯತಕ್ಕಂಥಾದ್ದು ಮತ್ತೊಂದು. ಪ್ರಕರಣ ಈಗ ನಡೆದು ಹೋಗಿದೆ. ಹೀಗೆ ನಡೆದು ಹೋಗಿದ್ದಕ್ಕೆ ಕ್ಷಮಾಪಣೆ ಮಾಡಿದ್ದಿರೋ? ಅಥವಾ ಬೇರೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರೋ? ಏನಾದರೂ ಒಂದು ಮಾಡಬೇಕಲ್ಲ ? ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾವು ಏನು ನಿರೀಕ್ಷೇ ಮಾಡುತ್ತೇವೆ ಅಂದರೆ, ಸಂವಿಧಾನ ಬದ್ಧವಾದಂಥ ಒಂದು ಸರಕಾರ, ಒಂದು ಮಂತ್ರಿಮಂಡಳ, ಇದೆಯೇ? ಹಾಗೆ ಮುಖಗಳು ನಮಗೆ ಕಾಣುತ್ತವೆ. ಆದರಿಂದ ಇದರಲ್ಲಿ ಸಂವಿಧಾನದ ಬದ್ಧತೆಯು ಬರುವುದಿಲ್ಲ. ಇಂಥ ಬದ್ಧತೆಯು ಯಾವಾಗ ಬರುತ್ತದೆ ಅಂದರೆ, ಮುಖ್ಯಮಂತ್ರಿಗಳಿಗೆ ಬಹುಮತ ಇದೆ, ಸರಕಾರ ಇದೆ ಎನ್ನತಕ್ಕಂಥಾದ್ದು ಸಾಬೀತು ಆದರೆ ಬರುತ್ತದೆ. ಆದನ್ನು ಸಾಬೀತು ಮಾಡತಕ್ಕಂಥದ್ದರ ಬಗ್ಗೆ ನಮ್ಮ ಕೆಲಸ ಏನಿದೆ ಅದನ್ನು ನಾವು ಮಾಡುತ್ತೇವೆ. ಆದರೆ ನಿಮ್ಮ ಪಕ್ಷದ ಆಂತಃಕಲಹದಿಂದಾಗಿ ಮುಖ್ಯಮಂತ್ರಿಗಳಿಗೆ ಬಹುಮತ ಇಲ್ಲ ಎನ್ನತಕ್ಕಂಥದ್ದು ನಿರ್ಧಿಷ್ಟವಾಗಿ, ನಿಖರವಾಗಿ ತೀರ್ಮಾನವಾಗಿರುವುದರಿಂದ ಸಂವಿಧಾನಾತ್ಮಕವಾದ ಒಂದು ಕ್ರೈಸಿಸ್ ನಿರ್ಮಾಣವಾಗಿದೆ- ಎಂದು

ನಾನು ಹೇಳಿದ್ದೇನೆ. ಆ ಒಂದು ದೃಷ್ಟಿಯಿಂದ ಈಗ ಮಾನ್ಯ ಮುಖ್ಯಮಂತ್ರಿಯವರು ಸಭಾ ನಾಯಕರು ಹೌದೋ ಅಲ್ಲವೋ ಎಂಬುದು ಮತ್ತು ಸಿಎಲ್‌ಪಿ ಲೀಡರ್ ಹೌದೋ, ಅಲ್ಲವೋ ಎಂಬುದು ನಿರ್ಣಯ ಆಗಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : – ಮಾನ್ಯ ಅಧ್ಯಕ್ಷರೇ,..ಒಂದು ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು : – ಈಗ ಸಾಕಷ್ಟು ಸಮಯ ಆಗಿದೆ. ಮಾನ್ಯ ಮುಖ್ಯಮಂತ್ರಿಯವರು ಸದನವು ಶುರು ಆಗುವುದಕ್ಕಿಂತ ಮೊದಲೇ ನನಗೆ ಭೇಟಿಯಾಗಿ ಮೇಲ್ಮನೆಗೆ ಹೋಗಿಬರುತ್ತೇನೆಂದು ಹೇಳಿದರು. ಆ ಮೇಲೆ ತಾವು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಇದು ಸಿಎಲ್‌ಪಿಗೆ ಸಂಬಂಧಪಟ್ಟಂಥ ವಿಷಯ. ಈಗ ಮುಖ್ಯಮಂತ್ರಿಯವರು ಬಂದಿದ್ದಾರೆ, ಇದರ ಬಗ್ಗೆ ಏನು ಹೇಳ ಬೇಕೋ ಅವರು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : – ಇದಕ್ಕೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಂಬಂಧ ಇದ್ದರೂ ಕೂಡ ಈ ಸದನಕ್ಕೆ ಅವರು ಏನೇನು ನಡೆದಿದೆ, ಅವರ ಪ್ರಾಣಕ್ಕೆ ಅಪಾಯ ಇದೆಯೇ ಎಂಬುದನ್ನು ಹೇಳಬೇಕು.

ಶ್ರೀ ಹೆಚ್. ಏಕಾಂತಯ್ಯ : – ಮಾನ್ಯ ಅಧ್ಯಕ್ಷರೇ, ನನ್ನದು ಕ್ರಿಯಾಲೋಪವಿದೆ. ಇದು ಕೇವಲ ಪಕ್ಷದ ಆಂತರಿಕ ವಿಷಯವಲ್ಲ. ಮುಖ್ಯಮಂತ್ರಿಯವರು ಹೇಳಿರುವಂತೆ ಅವರ ಜೀವಕ್ಕೆ ತೊಂದರೆಯಾಗಿದೆ ಎಂಬ ವಿಷಯವನ್ನು ಹೇಳಿದ್ದಾರೆ. ಹೀಗೆ ತೊಂದರೆಯಾಗಿರುವಂಥ ಪ್ರಕರಣ ಆಗಿದ್ದರೆ ಅದು ಅಪರಾಧ ಆಗಿರ ಬೇಕು. ಇಂಥ ಅಪರಾಧಿ ಕಾಗ್ನಿಸೆಬಲ್ ಆಗಿದ್ದರೆ, was there any attempt on the life of the Chief Minister? If that is so, ನಾವೆಲ್ಲರೂ ಸುಮ್ಮನೆ ಇರುವುದಕ್ಕೆ ಸಾಧ್ಯವಿಲ್ಲ. ಅಥವಾ ತಾವುಗಳು ಕೂಡ ಸುಮ್ಮನೆ ಇರುವುದಕ್ಕೆ ಸಾಧ್ಯವಿಲ್ಲ. ಇದು ಕೇವಲ ಒಬ್ಬ ವ್ಯಕ್ತಿ ಅಥವಾ ಪಕ್ಷದ ಒಳಗೆ ನಡೆದಂಥ ವಿದ್ಯಾಮಾನಗಳಿಗೆ ಸಂಬಂಧಪಟ್ಟ ವಿಷಯವಲ್ಲ. ಇದು ಇಡೀ ರಾಜ್ಯಕ್ಕೆ ಮತ್ತು ಈ ಸದನಕ್ಕೆ ಸಂಬಂಧಪಟ್ಟ ವಿಷಯವಾಗಿದೆ. ಒಂದು ವೇಳೆ ಸದನದ ಸದಸ್ಯರು ಅಲ್ಲದಿದ್ದರೂ ಕೂಡ ಯಾರ ಮೇಲಾದರೂ ಅಟೆಂಪ್ಟ್ ಟು ಮರ್ಡರ್ ಆದರೆ ಅವರವರು ಏನೇನೋ ಮಾಡಿಕೊಳ್ಳುತ್ತಾರೆ–ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಈಗ ಒಂದು ನಿರ್ಣಯವನ್ನು ಅವರುಗಳು ಮಾಡಿದ್ದಾರೆ. ಅದು ಏನೆಂದರೆ, ಮುಖ್ಯಮಂತ್ರಿಗಳಾದ ಮಾನ್ಯ ಮೊಯಿಲಿಯವರ ನಾಯಕತ್ವದಲ್ಲಿ ನಮಗೆ ವಿಶ್ವಾಸವಿಲ್ಲ ಎಂಬ ಮಾತನ್ನು ಅವರು ಹೇಳಿದ್ದಾರೆ.ಅದು ಹೊರಗೆ ಬಂದಿದೆ. ಅವರು ಪಕ್ಷದ ನಾಯಕರಾಗಿ ಮುಂದುವರಿದಿದ್ದಾರೋ ಇಲ್ಲವೋ? ಒಂದು ಪಕ್ಷ ಅವರಲ್ಲಿ ವಿಶ್ವಾಸವಿಲ್ಲ ಎಂಬ ಒಂದು ನಿರ್ಣಯವನ್ನು ಮಾಡಿದ್ದರೆ ಅದರ ಆಧಾರದ ಮೇಲೆ ಸಂವಿಧಾನಾತ್ಮಕವಾದಂಥ ಹಿರಿಯರು ಏನಿದಾರೆ, ಅಂಥ ಅಥಾರಿಟೀಸ್‌ಗೆ ಏನು ಅಧಿಕಾರ ಇದೆ, ಅವರು ರಾಜ್ಯಪಾಲರು ಇರಬಹುದು, ರಾಷ್ಟ್ರಪತಿಯವರು ಇರಬಹುದು, ಅವರು ಏನಾದರೂ ಈ ಬಗ್ಗೆ ಯಾವುದೇ ಕ್ರಮವನ್ನು ಈಗಾಗಲೇ ತೆಗೆದುಕೊಂಡಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಮಹದೇವ್ : – ಸಿಎಲ್‌ಪಿ ಮೀಟಿಂಗ್ ಇವತ್ತು ಸೇರಿದ್ದುದು ನಿಜ. ಇಂಟರ್ನಲ್ ಮ್ಯಾಟರ್ಸ್ ಸಾಮಾನ್ಯವಾಗಿ ಚರ್ಚೆಯಾಗುತ್ತಾ ಇರುತ್ತವೆ. ಅದರೆ ಒಂದು ವಿಷಯ ಹೇಳುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಇದರಲ್ಲಿ ಗೋಪ್ಯ ಉಳಿದಿಲ್ಲ.

ಶ್ರೀ ಎಂ.ಮಹದೇವ್ : ಮುಖ್ಯಮಂತ್ರಿಗಳಿಗೆ ಪ್ರಾಣಭಯ ಇದೆ ಎಂದು ಏನು ಹೇಳಲಾಗಿದೆ ಅದು ತಪ್ಪು, ಅಂತಹ ಘಟನೆಗಳು ಆಗಿಲ್ಲ.

(ಗೊಂದಲ)

ಶ್ರೀ ಎಂ.ಮಹದೇವ್ :- ಅವರಿಗೆ ಪ್ರಾಣಭಯ ಯಾರು ಮಾಡಿದ್ದಾರೆ, ಏನು ಮಾಡಿದ್ದಾರೆ ಎಂದು ಅವರು ಹೇಳಬೇಕಾಗುತ್ತದೆ, ಅವರು ಸ್ಪಷ್ಟಪಡಿಸಲಿ.

ಶ್ರೀ ವಾಟಾಳ್ ನಾಗರಾಜ್ :-. ಮಹದೇವ್ ಅವರೆ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ.

ಶ್ರೀ ಎಂ. ಮಹದೇವ್ : ಅದು ತಪ್ಪು, ಮುಖ್ಯಮಂತ್ರಿಗಳು ಆ ರೀತಿ ಹೇಳಿಕೆ ಕೊಟ್ಟಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಬಹುಶಃ ಅದು ನಿಜವಾಗಿದ್ದರೆ ಅವರು ಸದನದಲ್ಲಿ ನಿರ್ದಿಷ್ಟವಾಗಿ ಹೇಳಲಿ.

ಶ್ರೀ ಆರ್. ವಿ. ದೇಶಪಾಂಡೆ : ಅಧ್ಯಕ್ಷರೇ, ಈಗ ಇಲ್ಲಿ ಮತ್ತೊಂದು ಪಾಯಿಂಟ್‌ನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

"Talking to newsmen after the meeting, Mr.Moily said it was most unfortunate and highly condemnable that some members indulged in violence at the meeting and desfroyed property by breaking cups, saucers, glasses, chairs and microphones." ಮತ್ತಿನ್ನೇನು ಮಾಡೋದು ಇರುತ್ತದೆ.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಇದು ಮುಖ್ಯಮಂತ್ರಿಗಳು ಹೇಳುವ ಪದಗಳನ್ನೇ ನಾವು ವಿಮರ್ಶೆ ಮಾಡಿದರೆ ಇದಕ್ಕೆ ಇನ್ಯಾವ ಪಕ್ಷ ಎಂದು ಹೇಳಬೇಕು.

ಅಧ್ಯಕ್ಷರು : ತಾವು ಏನು ಪದಗಳನ್ನು ಬಳಸಿದ್ದೀರಿ ಅವು ಸರಿಯೋ ತಪ್ಪೋ ಪರಿಶೀಲನೆ ಮಾಡಿ ಅವನ್ನು ನಾನು ಎಕ್ಸ್‌ಪಂಜ್ ಮಾಡುತ್ತೇನೆ. ಎಲ್ಲ ಕುಳಿತುಕೊಳ್ಳಿ. ಈಗ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೋ ಅದು ಹೇಳಿ ಮುಗಿಸಲಿ.

SRI R.V. DESHAPANDE : I want a clarification. Property has been destroyed and goondaism is there. As I asked what action, civil, criminal or whatever it is, you have taken against these people. That is one. Secondly, who is going to reimburse this loss to the government? It is all government. Microphones, cups saucers which you have used in the Legislature party is of the government. So, who is going to reimburse the loss?

3.35 ಪಿ.ಎಂ

ಶ್ರೀ ಎಂ.ವೀರಪ್ಪ ಮೊಯಿಲಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು

ಮತ್ತು ಅನೇಕ ಹಿರಿಯ ಮಾನ್ಯ ವಿರೋಧ ಪಕ್ಷದ ಸದಸ್ಯರು ಎತ್ತಿದಂತಹ ವಿಚಾರಗಳಿಗೆ ಈಗಾಗಲೇ ಬಹಳ ಸ್ಪಷ್ಟವಾಗಿ ನಮ್ಮ ಉಪಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. I don't think, that requires any more elucidation or illustration. ಉತ್ತರ ಸರಿಯಾಗಿದೆ. ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಬಹಳ ಹೇಳಿದರೆ ಏನಾಗುತ್ತದೆ ಎಂದರೆ, ಅದು ಬಹಳ interpretationಗೆ ಅವಕಾಶವಾಗುತ್ತದೆ. ಸ್ಪಷ್ಟವಾಗಿ ಮೂರು ವಾಕ್ಯವನ್ನು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : – ತಮಗೆ ಮೈಕ್ಕಿನೋವುಗೀವು ಏನೂ ಆಗಿಲ್ಲವೇ?

ಶ್ರೀ ಎಂ. ವೀರಪ್ಪ ಮೊಯಿಲಿ : – ಸರ್ಕಾರದ ಆಸ್ತಿ ಪಾಸ್ತಿಗೆ ನಷ್ಟವಾಗಿದೆ. ಅದನ್ನು ಏನು ಮಾಡುತ್ತೀರಿ ಎಂದು ಹೇಳಿದ್ದಾರೆ. ಅದರ ಬಗ್ಗೆ ನಾನು ಈಗಾಗಲೇ ಅಧಿಕಾರಿಗಳಿಗೆ ಹೇಳಿದ್ದೇನೆ. ಏನೇನು ಎಸ್ಟಿಮೆಂಟ್ ಮಾಡುತ್ತೀರಿ ಅದನ್ನು ಕಾಂಗ್ರೆಸ್ ಲೆಜಿಸ್ಲೇಚರ್ ಪಾರ್ಟಿ ಭರ್ತಿ ಮಾಡಿಕೊಡುತ್ತದೆ ಎಂದು ಹೇಳಿದ್ದೇನೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : – ಪಕ್ಷದ ಸಭೆಯಲ್ಲಿ ಏನು ಘಟನೆಗಳು ನಡೆದಿವೆ ಅದು ಪಕ್ಷಕ್ಕೆ ಬಿಟ್ಟಿದ್ದುದು. ಪಕ್ಷದಲ್ಲಿ ನಡೆದಂತಹ ಘಟನೆಗಳಿಗೆ ನಾನು ಇಲ್ಲಿ ಉತ್ತರ ಹೇಳುವುದಕ್ಕೆ ಬರುವುದಿಲ್ಲ.

(ಗೊಂದಲ)

SRI H. EKANTHAIAH: Is it not an offence? If that is so, what is the action taken against the concerned? I want to know. Was there any attempt on the life of the Chief Minister? If so, what is the action taken by the government?

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : – ಪ್ರಯತ್ನ ನಡೆದಿದೆ ಎನ್ನುವ ಮಾತನ್ನು ಹೇಳಿದಿರಿ, ಪ್ರಯತ್ನ ನಡೆದಿದ್ದರೆ, ಆ ಪ್ರಯತ್ನವನ್ನು ಮಾಡಿದವರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಪ್ರಯತ್ನ ಆಗಿದೆಯೋ ಇಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : – ವಿಧಾನಸೌಧ ಇದೊಂದು ದೇವಸ್ಥಾನ ಇದ್ದಂತೆ. ಜನ ಆಯ್ಕೆ ಮಾಡಿ ಕಳುಹಿಸಿರುವಂತಹ ಈ ಪವಿತ್ರವಾದ ಸ್ಥಳವನ್ನು ಈ ಬಡಿದಾಟಕ್ಕೆ ಉಪಯೋಗ ಮಾಡಿದರೆ ಹೇಗೆ? ನೀವು ಕಾಂಗ್ರೆಸ್ ಕಛೇರಿಯಲ್ಲಿ ಬಡಿದಾಡಿ, ನಾವು ಚಿಂತೆ ಮಾಡುವುದಿಲ್ಲ. ಈ ಪ್ರವೃತ್ತಿ ಏನಿದೆ ಇದನ್ನು ಬೆಳೆಸುತ್ತೀರಾ? ಇದರಿಂದ ಮುಂದಿನ ಪೀಳಿಗೆಗೆ ಹಾಕುವಂತಹ ದಾರಿಯಾಗುವುದಿಲ್ಲವೇ? ದಯಮಾಡಿ ಇದನ್ನು ಕೊನೆ ಮಾಡಿ. ಈ ಘಟನೆ ನಮಗೆಲ್ಲ ನೋವನ್ನು ತಂದಿದೆ. ಇದರಲ್ಲಿ ರಾಜಕಾರಣವನ್ನು ಬೆರೆಸುವ ಪ್ರಶ್ನೆ ಇಲ್ಲ. ಕ್ರಮ ್ಯಾರಮೇಲಾದರೂ ತೆಗೆದುಕೊಳ್ಳಬೇಕಾಗುತ್ತದೆ. ಅದು ಬೇರೆ, ನಮಗೆ ಭರವಸೆಯನ್ನು ಕೊಡಿ. ಈ ಕಚ್ಚಾಟ ಈ ಬಡಿದಾಟವನ್ನು ಕೊನೆ ಮಾಡಿ.

ಶ್ರೀ ವೈ.ಕೆ. ರಾಮಯ್ಯ : – ನನಗೆ ಇಷ್ಟೆ ಕ್ಲಾರಿಫಿಕೇಶನ್ ಬೇಕಾಗಿರುವುದು. ಅವರ ಪಾರ್ಟಿ

ಸಭೆಯಲ್ಲಿ ಏನಾಯಿತು ಅನ್ನುವುದರ ಬಗ್ಗೆ ನಮಗೆ ಆಸಕ್ತಿ ಇಲ್ಲ. ಆದರೆ ಅಲ್ಲಿ ಕಾನೂನಿಗೆ ವಿರೋಧವಾದಂತಹ ಘಟನೆ ನಡೆದಿದೆ ಎಂದು ಅವರೇ ಒಪ್ಪಿಕೊಂಡಿದ್ದಾರೆ. Property destroy ಆಗಿದೆ, ಹೊಡೆದಾಟವಾಗಿದೆ ಎಂದು ನಮಗೆ ಮಾಹಿತಿ ಬಂದಿದೆ. ಅದು ಅಪರಾಧವೇ; ಅವರೇ ಒಪ್ಪಿಕೊಂಡಿದ್ದಾರೆ. ಇದು ಅಪರಾಧವೇ ಇಲ್ಲವೇ? ಏಕೆಂದರೆ ಅವರೇ ಗೃಹಮಂತ್ರಿಗಳಾಗಿದ್ದಾರೆ. Whether this act constitutes an offence or not? That is No.1. If so, whether you have asked the concerned authority to register the case against the concerned person? ಇವರೆಡಕ್ಕೂ ಉತ್ತರ ಬೇಕು.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : –ಇದರ ಬಗ್ಗೆ ಎಲ್ಲಾ ಹಿರಿಯ ಸಚಿವರು ಹೇಳುತ್ತಿದ್ದಾರೆ, ಎಲ್ಲಾ ಸಂಪೂರ್ಣ ಆಂತರಿಕವಾದಂತಹ ವಿಷಯ ಎಂದು ಅಲ್ಲಿ ಹೊಡೆದಾಟವಾದರೂ ಆಂತರಿಕವಾದಂತಹ ವಿಷಯವೆಂದು ಮಾನ್ಯ ಖಾರ್ಗೆಯವರು ಹೇಳುತ್ತಿದ್ದರು. ಒಳ್ಳೆಯದು ಅದನ್ನು ಒಪ್ಪುತ್ತೇನೆ. ಅದನ್ನು ದಯಮಾಡಿ ಈ ಕಟ್ಟಡದಲ್ಲಿ ಮಾಡಬೇಡಿ. ನಿಮ್ಮ ಒಬ್ಬರಿಗೆ ಅಲ್ಲ ನಾನು ವಿನಂತಿ ಮಾಡಿಕೊಳ್ಳುವುದು, ಜನತಾ ದಳದವರು ಇಲ್ಲಿ ಅವರ ಲೆಜಿಸ್ಲೇಚರ್ ಪಾರ್ಟಿ ಮೀಟಿಂಗ್ ಮಾಡುತ್ತಾರೆಂದು ಕಾಣುತ್ತದೆ, ಅದನ್ನು ತಪ್ಪಿಸಬೇಕು.

ಶ್ರೀ ಬಿ. ಹೆಚ್. ಬನ್ನಿಕೋಡ್ : – ನಿಮ್ಮ ಇಚ್ಛೆ ಇರಬೇಕು ಅಷ್ಟೆ. ಅಂತಹದ್ದೇನು ಆಗಿಲ್ಲ.

ಪ್ರೊ : ಎಂ.ಡಿ.ನಂಜುಂಡಸ್ವಾಮಿ : – ಏನು ಬೇಕಾದರೂ ನೀವು ಮಾಡಿಕೊಳ್ಳಿ, ನಾವೇನು ಅಡ್ಡಿ ಬರುವುದಿಲ್ಲ. ಆದರೆ ಈ ಕಟ್ಟಡದಲ್ಲಿ ಮಾಡಬೇಡಿ. ತಾವು ಇನ್ನೂ ಸಭಾನಾಯಕರಾಗಿದ್ದೀರಿ. Technically you are still the Leader of the House, because your strength is not tested in this House. ನಿಮ್ಮ ಸಿ ಎಲ್.ಪಿ ಯಲ್ಲಿ ಏನೋ– ಹೇಳಿರಬಹುದು, ಅದು ನನಗೆ ಸಂಬಂಧವಿಲ್ಲ. You are still Leader of the House. I request you to take that decision today not to allow to conduct the meeting of any Legislature Party, any Political party meeting in this building to which we all attach sanctity that is first ದಯವಿಟ್ಟು ಅಷ್ಟುಮಾಡಿ.

(ಗೊಂದಲ)

ಡಾ.ವೈ ನಾಗಪ್ಪ : – ನೀವು ಸಾವಿರಾರು ರೈತರುಗಳನ್ನು ವಿಧಾನಸೌಧಕ್ಕೆ ಕರೆದುಕೊಂಡು ಬಂದು ಗಲಾಟೆ ಮಾಡಿಸುವುದಕ್ಕೆ ಬರುತ್ತದೆ. ನಮ್ಮ ಪಾರ್ಟಿ ಮೀಟಿಂಗನ್ನು ಇಲ್ಲಿ ಮಾಡಬಾರದೇ?

(ಗೊಂದಲ)

ಪ್ರೊ : ಎಂ.ಡಿ. ನಂಜುಂಜಸ್ವಾಮಿ : – ಪ್ರೊಟೊಕಾಲ್ ಸ್ಪೆಲಿಂಗ್ ಗೊತ್ತಿದೆಯೇ

ಅಧ್ಯಕ್ಷರು : – ಡಾಕ್ಟರೇ ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೇ, ತಾವು ಹೇಳಿದ ಬಗ್ಗೆ, ಅದಕ್ಕಾಗಿಯೇ ನಾನು ಈ ಕರ್ನಾಟಕ ರಾಜ್ಯದ ಜನತೆಯ ಅಪಾಲಜಿಯನ್ನು ಕೇಳಿದ್ದೇನೆ. ಇಂಥ ಘಟನೆ ನಡೆದ ಬಗ್ಗೆ I am repeating that I apologise to the people for what has happened... ಅವರು ವಿಧಾನಸಭೆಯನ್ನು ಬಹಳ ಪವಿತ್ರವಾದಂಥ ಒಂದು ದೇವಸ್ಥಾನ ಇದ್ದಹಾಗೆ ಎಂದು

ಹೇಳಿದ್ದಾರೆ. ಇಲ್ಲಿ ಪ್ರಜಾಪ್ರಭುತ್ವದ ರಥೋತ್ಸವವಾಗಬೇಕು. ಆ ರೀತಿ ಇರುವಾಗ ಇಂಥ ಘಟನೆಗಳು ಈ ಸದನದ ಒಳಗಡೆ ನಡೆಯಲಿ ಅಥವಾ ಬೇರೆ ಎಲ್ಲಿಯಾದರೂ ನಡೆಯಲಿ, ಅದಕ್ಕೆ ನಾನು even before you ask me I have asked for an apology to the people of Karnataka and I have also said..

ಮತ್ತೆ ನಾನು ಏನು ಹೇಳಿದ್ದೇನೆ ಎಂದರೆ, ಇಂಥ ಸಂಸ್ಕೃತಿ ಕಾಂಗ್ರೆಸ್ ಪಕ್ಷಕ್ಕಾಗಲಿ ಅಥವಾ ಬೇರೆ ಪಕ್ಷಗಳಿಗಾಗಲಿ ಪ್ರಜಾಪ್ರಭುತ್ವಕ್ಕನುಗುಣವಾದಂಥ ಒಂದು ಸಂಸ್ಕೃತಿಯಲ್ಲಿ. ಅದನ್ನು ನಾವು ಹತ್ತಿಕ್ಕಲೇಬೇಕಾಗುತ್ತದೆ. ನಾನು ಕಾಂಗ್ರೆಸ್‌ನಲ್ಲಿ ಇರಲಿ ಅಥವಾ ಮುಖ್ಯ ಮಂತ್ರಿಯಾಗಿ ಇರಲಿ, ಯಾರೇ ಇರಲಿ ನಾನು ಹೇಳಿದ್ದೇನೆ, even at the stake of my life I will resist,ಅಂಥ ಸಂಸ್ಕೃತಿಯನ್ನು I will have to prevent it.

ಇಲ್ಲಿ ನನ್ನ ಪ್ರಾಣ ಅಮುಖ್ಯ, ನನ್ನ ಪ್ರಾಣ ಮುಖ್ಯವಲ್ಲ. ನನ್ನ ಪ್ರಾಣವನ್ನು ಮುಖ್ಯವಾಗಿ ಇಟ್ಟುಕೊಂಡು ಬದುಕಿದ್ದು ಇಲ್ಲ. ಚಿಕ್ಕಂದಿನಿಂದಲೂ ಒಂದು ಧ್ಯೇಯ ಸಿದ್ಧಾಂತಕ್ಕೆ ಕಾಂಗ್ರೆಸ್ ಮೌಲ್ಯಕ್ಕೆ, ರಾಜ್ಯದ ಹಿತಾಸಕ್ತಿ ಆಗುವುದು ಇದ್ದರೆ ನನ್ನ ಪ್ರಾಣ ಮುಖ್ಯವಲ್ಲ, ನನ್ನ ಪ್ರಾಣ ಹೋದರೂ ತೊಂದರೆಯಿಲ್ಲ. ಅದರ ಬಗ್ಗೆ ಕಂಪ್ಲೈಂಟ್ ಕೊಡುವುದು ಮತ್ತೊಂದು ಕೆಲಸಕ್ಕೆ ಹೋಗುವುದು ನನಗೆ ಇಷ್ಟವಿಲ್ಲ. After all when I consider state interest my life is not that important for me, I don't consider that I should give any complaint against anybody I am not interested...

(ಗೊಂದಲ)

(ಎಲ್ಲ ವಿರೋಧ ಪಕ್ಷದವರೂ ಎದ್ದು ನಿಂತು ಒಟ್ಟಿಗೆ ಕೂಗುತ್ತಿದ್ದರು. ಯಾವುದೂ ಸ್ಪಷ್ಟವಾಗಿ ಕೇಳುತ್ತಿರಲಿಲ್ಲ)

ಶ್ರೀ ಸಿ.ಬೈರೇಗೌಡ :- ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಘಟನೆ ನಡೆದಿಲ್ಲ ಎಂದು ಹೇಳಲಿಲ್ಲ. ಇಲ್ಲಿ ಉತ್ತರವನ್ನು ಕೊಟ್ಟಿರುವುದರಲ್ಲಿ ಘಟನೆ ನಡೆದಿದ್ದು ನಿಜ ಎಂದು ಹೇಳಿ ಒಪ್ಪಿದ್ದಾರೆ. ಮತ್ತೆ ಅಲ್ಲಿ ಆಗಿರುವ ಹಾನಿಯ ಬಗ್ಗೆ ಕೂಡ ಮಾತನಾಡಿದ್ದಾರೆ. ಮತ್ತೆ ಅದನ್ನು ಕಾಂಗ್ರೆಸ್ ಲೆಜಿಸ್ಲೇಚರ್ ಪಾರ್ಟಿಯಿಂದ ಸರ್ಕಾರಕ್ಕೆ ತುಂಬಿಸಿಕೊಡುತ್ತೇನೆ ಎಂದು ಹೇಳಿದ್ದಾರೆ. ಇದೆಲ್ಲ ಏನು ತೋರಿಸುತ್ತದೆ ಎಂದರೆ, ಅಲ್ಲಿ ಘಟನೆ ನಡೆದಿರತಕ್ಕಂಥದ್ದು ನಿಜ, ಮತ್ತೆ ಅವರು ನನ್ನ ಪ್ರಾಣ ಅಷ್ಟು ಮುಖ್ಯವಲ್ಲ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ.

SRI M. VEERAPPA MOILY : Eversince I became Advocate this is the fourth attempt on me.. ನಾಲ್ಕು ಅಟೆಂಮ್ಟ್‌ಗೂ ಕಂಪ್ಲೈಂಟ್ ಮಾಡಿಲ್ಲ. ಇನ್ನೂ ಕೂಡ ಮಾಡುವುದಿಲ್ಲ.

SRI Y.K.RAMAIAH : There was an attempt on your life. Then, is it not an offence..

ಶ್ರೀ ಹೆಚ್. ಏಕಾಂತಯ್ಯ :- ಅದನ್ನು ಆಫೆನ್ಸ್ ಎಂದು ಪರಿಗಣಿಸುವುದು ಬೇಡವೇ? ಇಲ್ಲಿ ಅವರ ಪ್ರಾಣ ಮುಖ್ಯವಲ್ಲ ಎಂದರೆ ಮತ್ತೊಬ್ಬರಿಗೆ ಅವರು ಪ್ರಾಣ ತೆಗೆಯತಕ್ಕಂಥ ಅವಕಾಶ

ಇದೆಯೇ?ನಮ್ಮ ಪ್ರಾಣ ನಮಗೆ ಮುಖ್ಯ ಇದೆ. ಇಲ್ಲಿ ಅವರ ಪ್ರಾಣವನ್ನು ತೆಗೆಯುವಂಥ ಅಪರಾಧವನ್ನು ಮಾಡಿದಾಗ ಅಪರಾಧ ಮಾಡಿದವರಿಗೆ ಶಿಕ್ಷೆ ಆಗಲೇ ಬೇಕು. ಅದು ಕಡ್ಡಾಯ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವರ ಹೇಳಿಕೆ ಪ್ರಕಾರ ಇದುವರೆಗೆ ನಾಲ್ಕನೇ ಸಾರಿ ಪ್ರಾಣ ಭಯ ಆಗಿದೆ; ಎಂದು ಹೇಳಿದರು. ಅಂದರೆ ಪ್ರಾಣ ಭಯ ಆಗಿರುವುದು ನಿಜ ಎಂದು ಹೇಳುತ್ತಿದ್ದಾರೆ. ಅಂದರೆ ನಮ್ಮ ಕರ್ತವ್ಯ ಏನು? ಈ ರಾಜ್ಯದ ಮುಖ್ಯಮಂತ್ರಿಯಾಗಿ ಅವರ ರಕ್ಷಣೆ ಏನು ಎನ್ನತಕ್ಕದ್ದು ನಮ್ಮ ಕರ್ತವ್ಯ: ಬೇರೆ ಮಾತಲ್ಲ, ಅದು ನಮಗೆ ಬೇಕಾಗಿರತಕ್ಕದ್ದು.

ಅಧ್ಯಕ್ಷರು : ಅವರು ಹೇಳಿದ್ದಾರೆ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : - ಅದರ ಬಗ್ಗೆ ಏನು ಎಂದು ಹೇಳಲಿ.

(ಗೊಂದಲ)

ಅಧ್ಯಕ್ಷರು : - ಅವರೇ ಈಗ ಹೇಳಿದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ : - ಮಾನ್ಯ ಮುಖ್ಯಮಂತ್ರಿಗಳು ನಾಲ್ಕು ಬಾರಿ ಅವರ ಜೀವನದಲ್ಲಿ ಅವರ ಮೇಲೆ ಅಟೆಂಪ್ಟ್ ಆಯಿತು ಎಂದು ಹೇಳಿದರು. ಅವರು ಯಾರ ಮೇಲೂ ಕಂಪ್ಲೇಂಟ್ ಕೊಟ್ಟಿಲ್ಲ ಎಂದು ಹೇಳಿದರು. ಆಯಿತು, ಅದು ಅವರ ಪರ್ಸನಲ್ ವಿಚಾರ, ಒಂದು ಕಾಲದಲ್ಲಿ ಇತ್ತು ಅದು ಹೆಚ್ಚಲ್ಲ.

ಶ್ರೀ ಎ.ಕೆ.ಅನಂತಕೃಷ್ಣ : ನನಗೆ ಮಾತನಾಡಲು ಅವಕಾಶ ಕೊಡಬೇಕು.

ಶ್ರೀ ಆರ್.ವಿ.ದೇಶಪಾಂಡೆ : ಮಾತನಾಡಲು ಅವಕಾಶ ಇದೆ.It is not a personal affair. He is constitutionally elected Chief Minister... ರೆಸ್ಪಾನ್ಸಿಬಲಿಟಿ ಅವರ ಮೇಲೆ ಇದೆ, ಕಾನೂನು ಸಂರಕ್ಷಣೆ ಮಾಡುವ ಜವಾಬ್ದಾರಿ ಅವರ ಮೇಲೆ ಇದೆ. He is also the Home Minister..

ಶ್ರೀ ಎ.ಕೆ.ಅನಂತಕೃಷ್ಣ : ಮಾನ್ಯ ಅಧ್ಯಕ್ಷರೇ,ನಮ್ಮ ಗೌರವದ ಒಂದು ಪ್ರಶ್ನೆ ಬಂದಿದೆ.

SRI M. VEERAPPA MOILY: Even if Moily dies today...

(INTERRUPTION)

ಶ್ರೀ ಎ.ಕೆ.ಅನಂತಕೃಷ್ಣ : ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ವಿಷಯದಲ್ಲಿ ನಾನು ಮಾತನಾಡಬೇಕು.

(ಗೊಂದಲ)

SRI R.V. DESHPANDE: I am not worried about my life the Chief Minister says. . .

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳ ರಕ್ಷಣೆ ಏನು?

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ : ಮಾನ್ಯ ಮುಖ್ಯಮಂತ್ರಿಗಳು ತನ್ನ ಜೀವದ ಮೇಲೆ ಅಪಾಯ

ಆಗಿದೆ ಎಂದು ಹೇಳಿದರು.

(ಗೊಂದಲ)

SRI R.V.DESHPANDE: The House is concerned about this offence ಇದು cowardness of the Chief Minister... ತೋರಿಸುತ್ತದೆ.

ನಿಮಗೆ ಕರೇಜ್ ಇಲ್ಲ ಹಾಗಾಗಿ the Chief Minister has no courage to take action against those persons who have indulged in Goondaism.

ಶ್ರೀ ಎ.ಕೆ.ಅನಂತಕೃಷ್ಣ : ಅವರಿಗೆ ಸಾಕಷ್ಟು ಅವಕಾಶ ಕೊಟ್ಟಿದ್ದೀರಿ.

(ಗೊಂದಲ)

SRI R.V.DESHPANDE: You have no courage to take action. You are the Chief Minister of the State, you should take action. We would like to know what action you are going to take...

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ಅವರಿಗೆ ರಕ್ಷಣೆ ಕೊಟ್ಟಿದ್ದಾರೆ ಮತ್ತು ಅವರಿಗೆ ಪ್ರೋತ್ಸಾಹ ಮಾಡುತ್ತಿದ್ದಾರೆ ಎನ್ನುವ ಭಾವನೆ ನಮಗೆ ಮತ್ತು ಜನರಿಗೆ ಬರಬಾರದು ?

ಶ್ರೀ ಸಿ.ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಇದು ನಾಲ್ಕನೇ ಸಾರಿ ನನ್ನ ಜೀವಕ್ಕೆ ಅಪಾಯ ಒದಗಿದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ.

ಶ್ರೀ ಎ.ಕೆ.ಅನಂತಕೃಷ್ಣ : ನಮಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಸಿ.ಬೈರೇಗೌಡ : ಅವರು ಕಂಪ್ಲೇಂಟ್ ಕೊಡದೇ ಇರಬಹುದು. ದೂರು ಕೊಡದೇ ಇರಬಹುದು.

ಅಧ್ಯಕ್ಷರು : ಈ ವಿಷಯವನ್ನು ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ.

ಶ್ರೀ ಎ.ಕೆ.ಅನಂತಕೃಷ್ಣ : ನಮಗೆ ಅವಕಾಶ ಕೊಡಲಿಲ್ಲ, ನಮಗೂ ಒಂದು ಅವಕಾಶ ಕೊಡಬೇಕು.

ಅಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಿ. ನಾನು ಹೇಳುವುದನ್ನು ನೀವು ಮೊದಲು ಆಲಿಸಬೇಕು.

(ಗೊಂದಲ)

ಶ್ರೀ ಎ.ಕೆ.ಅನಂತಕೃಷ್ಣ : ನಾನು ತಮಗೆ ಸಂಪೂರ್ಣ ಗೌರವ ಕೊಡುತ್ತೇನೆ.

ಅಧ್ಯಕ್ಷರು : ಇದರ ಬಗ್ಗೆ ಸದನದ ನಾಯಕರು ಹೇಳಿದ್ದಾರೆ. ಇದಕ್ಕಿಂತ ಗಂಭೀರವಾದ ವಿಚಾರ, ನಮಗೆ ಕಾವೇರಿ ಚರ್ಚೆ ಇದೆ. ಅದನ್ನು ಮುಂದುವರಿಸೋಣ ಎಂದು ನಾನು ತಮ್ಮಲ್ಲಿ ಕೋರಿಕೊಳ್ಳುತ್ತೇನೆ. ರಾಮಯ್ಯನವರು ಮಾತನಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾಲ್ಕೂವರೆ ಕೋಟಿ ಜನರ ರಕ್ಷಣೆ ಮಾಡ ಬೇಕಾದವರು, ಗೃಹ ಮಂತ್ರಿಗಳೂ ಆಗಿರುವವರು ನನ್ನ ಜೀವಕ್ಕೆ ಅಪಾಯ ಬಂದಿದೆ ಎಂದು ಹೇಳಿಕೆ ಕೊಡುವುದಾದರೆ ನಾಡಿನ ಜನರ ಪರಿಸ್ಥಿತಿ ಏನು? ಇದು ವೈಯಕ್ತಿಕವಾಗಿ ಮುಖ್ಯಮಂತ್ರಿಗಳ ಪ್ರಶ್ನೆ ಅಲ್ಲ. ಇದು ಈ

ಸದನದ ಇತಿಹಾಸದಲ್ಲೆ ಅಪಮಾನಕರವಾದ ಘಟನೆ. ಯಾವುದೇ ಮುಖ್ಯಮಂತ್ರಿ ಆಲ್ಲಿ ನಿಂತುಕೊಂಡು ನನಗೆ ಪ್ರಾಣ ಭಯ ಆಗಿದೆ ಎಂದು ಹೇಳಿರಲಿಲ್ಲ. ಇದೇ ಮೊದಲ ಪರಿಸ್ಥಿತಿ ತುಂಬಾ ಗಂಭೀರ..

ಅಧ್ಯಕ್ಷರು : ರಾಮಯ್ಯನವರೇ, ತಾವು ಚರ್ಚೆಯನ್ನು ಮುಂದುವರೆಸಿ, No more discussion on this...

ಶ್ರೀ ವಾಟಾಳ್ ನಾಗರಾಜ್ : ನಾವು ಈ ಬಗ್ಗೆ ಎಲ್ಲಾ ವಿರೋಧ ಪಕ್ಷದವರು ರಾಜ್ಯಪಾಲರನ್ನು ಭೇಟಿ ಮಾಡಬೇಕಾಗುತ್ತದೆ. ಸರ್ಕಾರದಲ್ಲಿ ಪರಿಸ್ಥಿತಿ ಏನು ಆಗಿದೆ? ಮಾನ್ಯ ಮುಖ್ಯಮಂತ್ರಿಗಳಿಗೆ ರಕ್ಷಣೆ ಇಲ್ಲ; ಬೆಳಿಗ್ಗೆ ನಡೆದಿರತಕ್ಕ ಸಮಗ್ರವಾದ ವಿಚಾರವನ್ನು ನಾವು ರಾಜ್ಯಪಾಲರಿಗೆ ಹೇಳಬೇಕಾಗುತ್ತದೆ. ನಾಳೆ ವಿರೋಧ ಪಕ್ಷದವರು ರಾಜ್ಯಪಾಲರಲ್ಲಿ ಹೋಗಬೇಕಾಗುತ್ತದೆ. ಈ ಪರಿಸ್ಥಿತಿ ಉದ್ಭವ ಆಗುತ್ತದೆ.

ಅಧ್ಯಕ್ಷರು : ರಾಮಯ್ಯನವರು ತಾವು ಮುಂದುವರಿಸಿ.

ಶ್ರೀ ಎ.ಕೆ.ಅನಂತಕೃಷ್ಣ : ಬಹಳ ಗಂಭೀರವಾದ ಒಂದು ಆರೋಪ ಇರಬೇಕಾದರೆ ನನಗೆ ನೀವು ಅವಕಾಶ ಕೊಡಲಿಲ್ಲ.

(ಗೊಂದಲ)

ಅಧ್ಯಕ್ಷರು : ತಮ್ಮ ಮೇಲೆ ಆರೋಪ ಮಾಡಿಲ್ಲ, ನಾಯಕರು ಉತ್ತರ ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು : ನಾನು ಯಾವ ಪಾರ್ಟಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಮಾನ್ಯ ಸಭಾ ನಾಯಕರು ಉತ್ತರ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಬಸವರಾಜ ರಾಯ ರೆಡ್ಡಿ : ಇದು ಪಾರ್ಟಿ ವಿಚಾರ ಅಲ್ಲ.

(ಗೊಂದಲ)

ಅಧ್ಯಕ್ಷರು : ನಿಮ್ಮ ಲೀಡರ್ ಎಲ್ಲಾ ಪ್ರಸ್ತಾಪ ಮಾಡಿದ್ದಾರೆ. No more discussion on this.

(ಗೊಂದಲ)

ಶ್ರೀ ಎ.ಕೆ.ಅನಂತಕೃಷ್ಣ : ತಾವು ಕೋಪ ಮಾಡಿಕೊಂಡಿದ್ದೀರಿ.

ಅಧ್ಯಕ್ಷರು : ನಾನು ಯಾರ ಮೇಲೂ ಕೋಪ ಮಾಡುವುದಿಲ್ಲ.

ಶ್ರೀ ಎ.ಕೆ.ಅನಂತಕೃಷ್ಣ : ಮಾನ್ಯ ಮುಖ್ಯಮಂತ್ರಿಗಳು ನನ್ನ ಮೇಲೆ ಆರೋಪ ಮಾಡಿದ್ದಾರೆ, ನನಗೆ ಮಾತನಾಡಲು ಅವಕಾಶ ಇಲ್ಲ ಎಂದರೆ.

ಅಧ್ಯಕ್ಷರು : ನಿಮಗೆ ಅವಕಾಶ ಇಲ್ಲ ಎಂದಲ್ಲ. ಅವಕಾಶ ಕೊಡುತ್ತೇನೆ. ಅವರು ನಿಮ್ಮ ಮೇಲೆ ಆರೋಪ ಮಾಡಿಲ್ಲ. ತಮ್ಮ ನಾಯಕರು ಹೇಳಿದ ಮೇಲೆ ಮತ್ತೇನು ಹೇಳುವುದು?

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೇ, ಅವರಿವರು ಹೇಳಿದ್ದನ್ನು ಕೇಳುವುದಕ್ಕೆ ನಮಗೆ ಅವಕಾಶ ಮಾಡಿಕೊಟ್ಟಿದ್ದೀರಿ. ನಮ್ಮಿಂದ ಪ್ರಾಣಹಾನಿ ಬಂತೆಂದು ಅವರು ಮಾತನಾಡಿದ್ದಾರೆಂದರೆ ಅದಕ್ಕೆ ಜವಾಬು ಕೊಡಬೇಕೆ? ಬೇಡವೆ? Kindly give me half-a-minute..

ಶ್ರೀ ಎಂ.ಮಹದೇವ್ : ಆಟೆಂಪ್ಟ್ ಟು ಮರ್ಡರ್ ಯಾರು ಮಾಡಿರುತ್ತಾರೆ? ಆಟೆಂಪ್ಟ್ ಟು ಮರ್ಡರ್ ಎಂದರೆ we are all responsible Legislators ಮುಖ್ಯಮಂತ್ರಿಗಳು ನಾಯಕರಾಗಿ

ಸುಳ್ಳು ಹೇಳಿದ್ದಾರೆ.

ಅಧ್ಯಕ್ಷರು : ಮಹದೇವು ಮತ್ತು ಅನಂತಕೃಷ್ಣರವರೇ, ತಾವು ಕುಳಿತುಕೊಳ್ಳಬೇಕು.

ಶ್ರೀ ಎಂ.ಮಹದೇವ್ : ಇದು ನಡೆದಿಲ್ಲ, ಇದು ಕಟ್ಟುಕತೆ. I would like to know this matter. I have not given an opportunity....

SRI A.K.ANANTHAKRISHNA: I must be given an opportunity... arbitrarily, unilaterly you have allowed the Chief Minister to make a statement....

SRI M.MAHADEV: It is totally false. It is damaging to our party...

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಬೇಕು, ತಾವು ಆವೇಶಭರಿತರಾಗಿ ಮಾತನಾಡಬಾರದು, ಸಭಾ ನಾಯಕರು ಹೇಳಿದ್ದಾರೆ. ಈಗ ನಾವು ಮುಂದಿನ ಕಾರ್ಯ ಕಲಾಪಗಳಿಗೆ ಹೋಗೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ : ಈ ನಾಡಿನ ನಾಲ್ಕೂವರೆ ಕೋಟಿ ಜನಸಂಖ್ಯೆಗೆ ಸ್ವಚ್ಛ, ದಕ್ಷ, ಪ್ರಾಮಾಣಿಕ ಸರ್ಕಾರ ಕೊಡುತ್ತೇವೆಂದು ಹೇಳಿದ್ದು, ಇವೊತ್ತು ಇಂತಹ ಒಂದು ಪರಿಸ್ಥಿತಿ ಒದಗಿಬಂದಿದೆ. ಇದು ಅಪಮಾನಕರವಾದ ಸಂಗತಿ. ಇಂತಹವರು ಅಧಿಕಾರದಲ್ಲಿ ಮುಂದುವರೆಯುತ್ತಿರುವುದಕ್ಕೆ ವಿಷಾದ ವ್ಯಕ್ತಪಡಿಸಿ, ದಯಮಾಡಿ ತಾವು ರಾಜೀನಾಮೆ ಕೊಟ್ಟು ಹೊರಗೆ ಹೋಗಿ. ಇದನ್ನು ಕೇಳುವುದಕ್ಕೆ ನಾವು ಸಿದ್ಧರಿಲ್ಲ, ನಾವು ಹೊರಗಡೆ ಹೋಗುತ್ತೇವೆ. ಇವೊತ್ತು ತಾವು ನಾಲ್ಕೂವರೆ ಕೋಟಿ ಜನರ ರಕ್ಷಣೆ ಮಾಡಬೇಕು. ಆದರೆ, ಪರಿಸ್ಥಿತಿ ಎಲ್ಲಿಗೆ ಬಂದಿದೆ? ಎಲ್ಲಿಯೋ ಪಾರ್ಟಿ ಆಫೀಸಿನಲ್ಲಿ ಗಲಾಟೆ ಮಾಡುವ ಯೋಚನೆ ಮಾಡುತ್ತೀರಲ್ಲ, ಇವರು ಹೇಳುವುದು ಸುಳ್ಳು ಎಂದು ಅವರು ಎದ್ದು ನಿಂತುಕೊಂಡು ಹೇಳುತ್ತಾರೆ, ನಾನು ಪ್ರಾಣ ಕೊಡುವುದಕ್ಕೆ ಸಿದ್ಧವೆಂದು ಇವರು ಹೇಳುತ್ತಾರೆ. ನಾಲ್ಕೂವರೆ ಕೋಟಿ ಜನರ ಗತಿ ಏನು? ಅವರು ಸಾಯುತ್ತಿದ್ದಾರೆ, ಅವರ ಬಗ್ಗೆ ಚಿಂತನೆ ಮಾಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ : 'ನಾಯಕರಾಗಿ ಸುಳ್ಳು ಹೇಳಿದ್ದಾರೆ' ಎಂದು ಮಾನ್ಯ ಸದಸ್ಯರು ಹೇಳಿದ ಮಾತು ರೆಕಾರ್ಡ್‌ಗೆ ಹೋಗಿದೆ.

ಅಧ್ಯಕ್ಷರು : ದಾಖಲೆ ತರಿಸಿ ನಾನು ನೋಡುತ್ತೇನೆ.

(ಗೊಂದಲ)

ಶ್ರೀ ಸಿ.ಬೈರೇಗೌಡ : ಈಗ ಇವರು ಮಾನ್ಯ ಮುಖ್ಯಮಂತ್ರಿಗಳಾಗಿ ದೂರು ಕೊಡಬೇಕಾಗಿಲ್ಲ. ಈ ಕೃತ್ಯ ನಡೆದರೆ ಕಾನೂನಿನಲ್ಲಿ it is a cognizable offence. Case must be registered. . ಅವರ ಜೀವಕ್ಕೆ ಅಪಾಯ ಒದಗಿದೆಯೆಂದರೆ Police are duty bound to register the case...ನಾನೇನೂ ವಕೀಲನಲ್ಲ, ರಾಮಯ್ಯನವರು ವಕೀಲರಾಗಿ ಹೇಳುತ್ತಾರೆ. ಸೆಕ್ಷನ್ 307 ಪ್ರಕಾರ it is a cognizable offence.. case must be registered..ಇಲ್ಲಿರತಕ್ಕಂಥ ಸದಸ್ಯರು ಆ ತರಹ ನಡೆದಿಲ್ಲವೆಂದು ಹೇಳಿದರೆ ಆ ತರಹ ನಡೆದಿದೆಯೆಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ಬಹುಶಃ ಮಹದೇವುರವರೇ ಆ ಕೆಲಸ ಮಾಡಿರಬೇಕು.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ :- ಒಂದು ವಿಚಾರದಲ್ಲಿ ನಾನು ಸ್ಪಷ್ಟೀಕರಣವನ್ನು

ಕೊಡಬೇಕಾಗಿದೆ. ಏಕೆಂದರೆ ಈ ವಿಷಯ ಯಾವುದ್ಯಾವುದೋ ದಾರಿಯನ್ನು ಹಿಡಿಯುತ್ತಿದೆ. I never said that the attempt on my life inside CLP..

(ಗೊಂದಲ)

SRI D.B.CHANDRE GOWDA:- Talking to the Press the Chief Minister said that some Members indulged in violence at the CLP meeting ...Now he says..

(ಗೊಂದಲ)

SRI M.MAHADEV:- It is about party's internal matter. Why should you interfere..

ಅಧ್ಯಕ್ಷರು :- ಮಹದೇವ್‌ರವರೆ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ರಮೇಶ್ :- ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟೀಕರಣವನ್ನು ಕೊಟ್ಟರೂ ಕೂಡ ಇವರಿಗೆ ಅರ್ಥವಾಗವಿಲ್ಲವೆಂದರೆ ಹೇಗೆ?

SRI M.MAHADEV:- We are all one. He is our Leader. Don't try to divide our party.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ವೃದ್ಧಾಪ್ಯದಲ್ಲಿ ಪತಿವ್ರತೆಯಂತೆ ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ :- ಈ ವಿಚಾರವನ್ನು ಬಹಳ ವಿಸ್ತಾರವಾಗಿ ಬೆಳೆಸುವುದು ಬೇಡವೆನ್ನತಕ್ಕ ಅರ್ಥದಲ್ಲಿ ಕೆಲವು ವಿಚಾರಗಳನ್ನು ಪತ್ರಿಕೆಯವರು ಕೇಳಿದಾಗ. I know my life is a target- one of the targets ಎಂದು ಹೇಳಿದೆ. I never said that my life was a target inside the CLP. I never said. But after I came out from the CLP; after I came out from the Conference Hall-certain information has come to me, reliable information which I also partly observed that there was an attempt. That is all...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ಈ ರೀತಿ ಹಸಿ ಸುಳ್ಳನ್ನು ಹೇಳತಕ್ಕ ಮುಖ್ಯಮಂತ್ರಿಯವರು ಒಂದು ಕ್ಷಣವೂ ಅಧಿಕಾರದಲ್ಲಿ, ಮುಖ್ಯಮಂತ್ರಿಯ ಸ್ಥಾನದಲ್ಲಿ ಇರಲು ಅರ್ಹರಲ್ಲ. ಅವರು ಅಧಿಕಾರದಲ್ಲಿ ಮುಂದುವರೆಯಬಾರದು.

(ಗೊಂದಲ)

(ಸರ್ಕಾರದ ಧೋರಣೆಯನ್ನು ವಿರೋಧಿಸಿ ಮಾನ್ಯ ಯಡಿಯೂರಪ್ಪನವರು ಸಭೆಯಿಂದ ಹೊರಕ್ಕೆ ನಿರ್ಗಮಿಸಿದರು : ಸಭಾತ್ಯಾಗ ಮಾಡಿದರು)

ಶ್ರೀ ಡಿ.ಬಿ. ಚಂದ್ರೆಗೌಡ :- ಅದಕ್ಕಾಗಿಯೇ ನಾನು ಮೊದಲು ಮುಖ್ಯಮಂತ್ರಿಯವರ ಅಧಿಕೃತ ಹೇಳಿಕೆಯನ್ನು ಸದನದ ಮುಂದೆ ಇಟ್ಟಿದ್ದೇನೆ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ :- ವಿಧಾನಸೌಧದ ಮುಂದೆ, ವಿಧಾನಸೌಧ ಕಛೇರಿಯಲ್ಲಿ ಮುಖ್ಯಮಂತ್ರಿಯವರಿಗೆ ಪ್ರಾಣಬೆದರಿಕೆಯನ್ನು ಉಂಟುಮಾಡಿದರು ಎಂದರೆ ಹೇಗೆ?

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ :- ಇಲ್ಲಿಯವರೆಗೂ ಮುಖ್ಯಮಂತ್ರಿಯವರು ಹೀರೋ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು, ಆದರೆ ಇವತ್ತು ಜೀರೋ ಆಗಿದ್ದಾರಲ್ಲ. ಈ ಸದನದಲ್ಲೇ ನನ್ನ ಮೇಲೆ ಪ್ರಾಣಬೆದರಿಕೆಯಾಗಿದೆ ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ :- ನಾನು ಈಗಾಗಲೇ ಹೇಳಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಮುಂಚೆ ಒಂದು ಹೇಳಿದ್ದರು, ಈಗ ಒಂದು ಹೇಳುತ್ತಿದ್ದಾರೆ. ಅವರಿಗೆ ಏನು ಭಯ ಇದೆ ಎಂಬುದು ಗೊತ್ತಾಗುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಆ ರೀತಿ ಮಾಡಬಾರದು. ಮಾನ್ಯ ಮುಖ್ಯ ಮಂತ್ರಿಗಳು ತಪ್ಪು ತಿಳಿಯಬಾರದು ಆ ರೀತಿ ಮಾಡಿದರೆ ಅದು ಹೇಡಿಗಳ ಕೆಲಸವಾಗುತ್ತದೆ. ಒಮ್ಮೆ ಪ್ರಾಪರ್ಟಿ ಡೆಸ್ಟ್ರಾಯ್ ಎಂದು ಹೇಳುತ್ತಾರೆ ಒಮ್ಮೆ ಅಟೆಂಪ್ಟ್ ಆಗಿದೆ ಎಂದು ಹೇಳುತ್ತಾರೆ ಒಮ್ಮೆ ಆಗಿಲ್ಲವೆಂದು ಹೇಳುತ್ತಾರೆ. ಹೀಗೆ ಹೇಳಿದರೆ ಹೇಗೆ? ಹೋಮ್ ಮಿನಿಸ್ಟರ್ ಆಗಿದ್ದಾರೆ ಮಾನ್ಯ ಮುಖ್ಯ ಮಂತ್ರಿಗಳಿದ್ದಾರೆ. ಕರ್ನಾಟಕದ ನಾಲ್ಕೂವರೆ ಕೋಟಿ ಜನರಿಗೆ ನೀವು ರಕ್ಷಣೆ ಕೊಡಬೇಕಾಗುತ್ತದೆ. ವಿತ್ ಕನ್‌ಸ್ಟ್ರೈನ್ ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಈ ಸರಕಾರ ಅಧಿಕಾರದಲ್ಲಿ ಉಳಿಯಲಿಕ್ಕೆ ಎಲ್ಲಾ ಆರ್ಹತೆ ಕಳೆದುಕೊಂಡಿದೆ. No moral right to continue. As a protest we are walking out...

(ಜನತಾ ದಳದ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಸಿ.ಬೈರೇಗೌಡ :- ಈ ಸದನದಲ್ಲಿ ಹೇಳಿದ್ದಾರೆ, ಇದು 4ನೇ ಸಾರಿ ನನ್ನ ಜೀವಕ್ಕೆ ಹಾನಿಯಾಗುತ್ತಿದೆ ಎಂದು. ಇಷ್ಟು ಶುದ್ಧ ಸುಳ್ಳು ಹೇಳತಕ್ಕಂತಹ ಮುಖ್ಯ ಮಂತ್ರಿಗಳು ಇರುವುದು ಈ ರಾಜ್ಯದ ದುರಾದೃಷ್ಟ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಮುಖ್ಯ ಮಂತ್ರಿಗಳು ಈಗತಾನೆ ಹೇಳಿದರಲ್ಲ ಸ್ವಾಮಿ. ನನ್ನ ಶರೀರದ ಮೇಲೆ 4 ಬಾರಿ.....

ಅಧ್ಯಕ್ಷರು :- ಈಗ ಅದನ್ನು ಮುಕ್ತಾಯಮಾಡಿ ಇದು ಯಾವುದೂ ರೆಕಾರ್ಡಿನಲ್ಲಿ ಹೋಗುವುದಿಲ್ಲ. ಸಾಕಷ್ಟು ಕಾಲಾವಕಾಶ ನೀಡಿದ್ದೇನೆ. ತಾವು ಪ್ರಸ್ತಾವನೆ ಮಾಡಿ ಹೇಳಿದ್ದೀರಿ. ಅದಕ್ಕೆ ಲೀಡರ್ ಉತ್ತರ ನೀಡಿದ್ದಾರೆ. ಪುನಃ ಹೇಳುವುದು ಬೇಕಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಅವರು ಬಹಳ ಭಯಬಿದ್ದು, ಮುಚ್ಚುಮರೆಯಿಂದ ಹೇಳುವುದಕ್ಕೆ ಅವರ ಕೈಯ್ಯಲ್ಲಾಗುತ್ತಿಲ್ಲ. ನಾಲ್ಕಾರು ಕಡೆಯಿಂದ ಅವರ ಮೇಲೆ ಒತ್ತಡ ತರುತ್ತಿದ್ದಾರೆ. ಬೆಳಿಗ್ಗೆ ಅವರ ಮೇಲೆ ಧಾಳಿ ಮಾಡಿದವರೇ ಒತ್ತಡ ತರುತ್ತಿದ್ದಾರೆ. ಆದ್ದರಿಂದ ಅವರು ಆ ಒತ್ತಡಕ್ಕೆ ಮಣಿದು ನಿಜ ಹೇಳಬೇಕೆಂದು ಕೊಂಡರೂ ಅವರ ಕೈಯಲ್ಲಿ ಹೇಳುವುದಕ್ಕಾಗುತ್ತಿಲ್ಲ ಇವತ್ತಿನ ಪರಿಸ್ಥಿತಿಯಲ್ಲಿ.

ಶ್ರೀ ಎಂ.ಮಹದೇವ್ :- ಇಷ್ಟೊಂದು ಕಾಲ ವ್ಯಯ ಮಾಡುವುದು ಬೇಡ. ನಮ್ಮಲ್ಲಿ ಭಿನ್ನಾಭಿಪ್ರಾಯ ಮಾಡಬೇಡಿ.

ಶ್ರೀ ವಾಟಾಳ್ ನಾಗರಾಜ್ : – ಮಾನ್ಯ ಮುಖ್ಯಮಂತ್ರಿಗಳೇನು ಹೇಳಿದರು ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನನಗೆ 4 ಬಾರಿ ಪ್ರಾಣ ಭಯ ಒಡ್ಡಿದ್ದಾರೆಂದು ಹೇಳಿದ್ದಾರೆ ಅಂದರೆ ಏನು ಅರ್ಥ. 1 2 3 ಬೇರೆ ಕಡೆ 4ನೇ ಬಾರಿ ಎಲ್ಲಿ ಅದು ಹೇಳಬೇಕು. ಈ ಸದನದಲ್ಲಿ ಹೇಳಿದರು 4ನೇ ಬಾರಿ ಅಂದರೆ ಎಲ್ಲಿ ಎನ್ನುವುದು ನನಗೆ ಅರ್ಥವಾಗಬೇಕು. 4ನೇ ಬಾರಿ ಎಲ್ಲಿ ಅವರಿಗೆ ಪ್ರಾಣ ಭಯ ಬಂತು ಅದನ್ನು ಹೇಳಬೇಕು. ಅದು ಕಡತದಲ್ಲಿ ಹೋಗಿದೆ. ಮಾನ್ಯ ಉಪ ಮುಖ್ಯ ಮಂತ್ರಿಗಳು ತಾವು ಚೆನ್ನಾಗಿ ವ್ಯಾಖ್ಯಾನ ಮಾಡುತ್ತೀರಿ ತಾವು ಹೇಳಿ. 4ನೆಯದು ಎಲ್ಲಿ ನಡೆಯಿತು ಅದನ್ನು ಹೇಳಲಿ. ನಿಮ್ಮ ಬಗ್ಗೆ ನನಗೆ ಬಹಳ ಗೌರವವಿತ್ತು, ಈ ರೀತಿ ಸದನಕ್ಕೆ ಸುಳ್ಳು ಹೇಳುವುದು ನೋಡಿದರೆ ನನಗೆ ಅತ್ಯಂತ ಖೇದವೆನಿಸುತ್ತದೆ. ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಇಂತಹ ಸರಕಾರವಿರುವ ಬದಲು, ಇವೆರಡೂ ಗುಂಪು ಕಿತ್ತಾಡಿ ರಾಜ್ಯದ ಆಡಳಿತವನ್ನು ಮೂಲೆ ಗುಂಪು ಮಾಡಿದ್ದೀರಿ, ಆಡಳಿತ ದಿವಾಳಿಯಾಗಿದೆ. ನಾವು ಬೇಕಾದರೆ ಈ ಸದನದಲ್ಲೆ ರಾಜ್ಯಪಾಲರನ್ನು, ರಾಷ್ಟ್ರಪತಿಯವರನ್ನು ಒತ್ತಾಯ ಮಾಡುತ್ತೇವೆ. ಈ ಸರಕಾರವನ್ನು ವಜಾ ಮಾಡಿ ಎಂದು ಹೇಳುತ್ತಿದ್ದೇವೆ. ಸಂಪೂರ್ಣ ರಾಷ್ಟ್ರಪತಿ ಆಳ್ವಿಕೆ ಬರಲಿ ಎಂದು ಒತ್ತಾಯ ಮಾಡಿ, ಆ ಒತ್ತಾಯಕ್ಕೆ ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಎ.ಕೆ.ಅನಂತ ಕೃಷ್ಣ : – ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು. ಅಲ್ಲಿ ಏನು ನಡೆಯಿತು ಎಂದು.....

ಅಧ್ಯಕ್ಷರು : – ಆ ಚರ್ಚೆಗೆ ಅವಕಾಶ ಇಲ್ಲ. ತಾವು ಕುಳಿತುಕೊಳ್ಳಿ.

ಕಾವೇರಿ ನದಿ ನೀರಿನ ವಿವಾದ ಕುರಿತು ಚರ್ಚೆ

(ಮುಂದುವರಿದ ಚರ್ಚೆ).

ಶ್ರೀ ವೈ.ಕೆ.ರಾಮಯ್ಯ : – ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಈ ಒಂದು ಪರಿಸ್ಥಿತಿಯಿರುವಾಗ ಈ ವಾತಾವರಣದಲ್ಲಿ ಈ ರಾಜ್ಯದ ಅಭಿವೃದ್ಧಿಯ ಅತ್ಯಂತ ಪ್ರಮುಖ ವಿಷಯದ ಬಗ್ಗೆ ಮಾತನಾಡುವಾಗ ಅದನ್ನು ಯಾರಾದರೂ ಕೇಳುವವರಿದ್ದಾರೆಯೇ? ಕೇಳಿ ಅನುಷ್ಠಾನಕ್ಕೆ ತರುವಂತಹ ಪರಿಸ್ಥಿತಿ ಇದೆಯೇ ಎಂದು ನನಗೆ ಅನುಮಾನ ಬಂದಿದೆ. ಅದು ಏನಾದರೂ ಆಗಿಕೊಂಡು ಹೋಗಲಿ. ನನ್ನ ಸ್ನೇಹಿತರು ಮಂತ್ರಿಮಂಡಲ ಇದೆಯೆಂದು ಭಾವಿಸಿಕೊಳ್ಳಿ ಎಂದು ಹೇಳಿದರು. ಮಂತ್ರಿಮಂಡಲವಿದೆ ಎಂದು ಭಾವಿಸಿಕೊಂಡು ಕಾವೇರಿ ನೀರಿನ ಹಂಚಿಕೆ ವಿಷಯದಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ. ಆದರೆ ಅನ್ಯಾಯವಾಗಲಿಕ್ಕೆ ನಮ್ಮಲ್ಲಿ ನ್ಯಾಯವಿದೆಯೇ? ತಮಿಳುನಾಡಿಗೂ ಕರ್ನಾಟಕಕ್ಕೂ ಇರುವಂತಹ ಈ ವಿವಾದದಲ್ಲಿ ಕರ್ನಾಟಕದವರದ್ದೇ ತಪ್ಪೇನೋ. ಪಾಪ ಕರ್ನಾಟಕದವರು ತಮಿಳುನಾಡಿನ ಬೆಳೆಗಾರರಿಗೆ ನೀರು ಬಿಟ್ಟು ಕೊಡುತ್ತಿಲ್ಲ ಅವರಿಗೆ ಅನ್ಯಾಯ ಮಾಡುತ್ತಿದ್ದಾರೆನ್ನುವುದು ರಾಷ್ಟ್ರ ಮಟ್ಟದಲ್ಲಿ ಪ್ರಚಾರ ನಡೆಯುತ್ತಿದೆ. ನಾನು ವಿಧಿಯಿಲ್ಲದೆ ಹೇಳಬೇಕಾಗುತ್ತದೆ, ಇದು ಪ್ರಚಾರ ಅಲ್ಲ, ಅಪಪ್ರಚಾರ ಎಂದು. ಹೇಗೆ ಅಪಪ್ರಚಾರ ಎಂದರೆ, ಅದಕ್ಕೆ

4.05 ಪಿ.ಎಂ

ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಈ ವರ್ಷ ನಮಗೆ ನೀರನ್ನು ಬಿಟ್ಟು ಕೊಡಬೇಕೆಂದು ತಮಿಳ್ನಾಡಿನವರು ಒಂದು ಪ್ರಸ್ತಾವನೆಯನ್ನು ನಮ್ಮ ಕರ್ನಾಟಕ ಸರ್ಕಾರದ ಮುಂದೆ ತಂದರು. ಅವರ ಬೇಡಿಕೆ ಏನೆಂದರೆ, ನಮ್ಮ ಕುರುವೈ ಬೆಳೆಯೆಲ್ಲಾ ಒಣಗಿ ಹೋಗುತ್ತಿದೆ; ಆ ಬೆಳೆಗೆ ನೀರನ್ನು ಬಿಟ್ಟುಕೊಡಬೇಕೆಂಬ ವಾದವನ್ನು ಮುಂದಿಟ್ಟು ಅವರು ನಮ್ಮ ಕರ್ನಾಟಕ ರಾಜ್ಯಕ್ಕೆ ಒಂದು